Sri H. D. Deve Gowda.—I as Leader of the Opposition also join hands on behalf of the Opposition in welcoming the Parliamentary Delegation. They have a short period at their disposal to sea many things. Within that short period, the Hon. Speaker will make arrangements to take them round to some of the importance places in Bangalore. I once again extend my heart-felt thanks.

BUDGET ESTIMATES FOR 1975-76 DEMANDS FOR GRANTS

Demahd Nos. 18, 19, 27, 53, 54 and 60 (Debate Contd)

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದುದರಿಂದ ಅವುಗಳ ಜೊತೆಗೆ ಈ ಬಾಡಿಗಳಿಂದಲೂ ರಸ್ತೆಗಳಿಗೆ ಧಕ್ಕೆಯಾಗುತ್ತದೆ ಈಗ ಮಾನ್ಯ ಸದಸ್ಯರು ಹೇಳಿದರು ಏನೆಂದರೆ ನಮ್ಮ ರಾಜ್ಯದಲ್ಲಿ ರಸ್ತೆಗಳ ಕೆಲಸ ಸಾಕಷ್ಟು ಪ್ರಮಾಣದಲ್ಲಿ ಬೆಳವಣಿಗೆಯಾಗುತ್ತಾ ಇಲ್ಲ, ಇರತಕ್ಕ ರಸ್ತೆಗಳು ಕೂಡ ಹೆಚ್ಚಾಗಿ ಕೆಟ್ಟು ಹೋಗುತ್ತಿವೆ ಮತ್ತು ವರ್ಷೇ ವರ್ಷೇ ರಸ್ತೆಗಳು ಆಗಬೇಕಾದ ಪ್ರಮಾಣದಲ್ಲಿ ಆಗುತ್ತಾ ಇಲ್ಲ. ರೂರಲ್ ಕಮ್ಯುನಿಕೇಷನ್ ಪ್ರಾರಂಭ ಮಾಡಿದಿರಿ, ಪೂಜೆ ಮಾಡಿದಿರಿ ಮುಂದಕ್ಕೆ ಬರಲಿಲ್ಲ ಎಂದು ಹೇಳಿದರು. ಕೆಲಸಕಾರ್ಯಗಳು ನಡೆಯುತ್ತಾ ಇದ್ದರೆ ನಮ್ಮ ಆಶೆ ಆಕಾಂಕ್ಷೆಗಳು ಹೆಚ್ಚಾಗುತ್ತವೆ ಅದನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕು.

ನಮ್ಮ ಆಶೆ ಆಕಾಂಕ್ಷೆಗಳು ಹೆಚ್ಚಾದ ಪ್ರಮಾಣದಲ್ಲಿ ಅದೇ ಪ್ರಮಾಣದಲ್ಲಿ ನಮ್ಮ ಹಣಕಾಸಿನ ಬೆಳವಣಿಗೆಯೂ ಆಗಲೇಬೇಕಾಗುತ್ತದೆ ಇಲ್ಲದೇ ಹೋದರೆ ನಿರೀಕ್ಷಿಸಿದಂಥ ಫಲ ದೊರಕುವುದು ಕಷ್ಟವಾಗುತ್ತದೆ. ಈಗ ಒಂದು ಕಡೆ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು ಅದು ಏನೆಂದರೆ ನಾವು ಪ್ರೊಡಕ್ಟಿವ್ ಅಸೆಟ್ಸ್‌ಗೆ ಪ್ರಾಧಾನ್ಯತೆ ಕೊಡಬೇಕು ಎಂದು ಅದನ್ನು ನಾವು ಕೊಡದೇ ಇರುವುದರಿಂದ ರಾಷ್ಟ್ರದಲ್ಲಿ ಆರ್ಥಿಕ ಸಂಪತ್ತು ಬೆಳೆಯದೇ ನಾವು ಇಂದು ಇಷ್ಟು ಕಷ್ಟಕಾರ್ಪಣ್ಯಗಳಿಗೆ ಬಂದು ಸಿಕ್ಕಿದ್ದೇವೆ ಎನ್ನತಕ್ಕಂಥದ್ದು ವಾಸ್ತವವಾದದ್ದು ಇರಿಗೇಷನ್. ಪವರ್‌ಗೆ ಹೆಚ್ಚಿನ ಹಣವನ್ನು ಒದಗಿಸಬೇಕು ಎನ್ನತಕ್ಕಂಥದ್ದನ್ನು ನಾನು ಒಪ್ಪುತ್ತೇನೆ. ಹೆಚ್ಚು ಹಣವನ್ನು ಒದಗಿಸಬೇಕೆಂದರೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಹೋದ ವರ್ಷ ಮತ್ತು ಈಚೆ ವರ್ಷ ಸ್ವಲ್ಪ ಮಟ್ಟಿಗೆ ಈ ರಸ್ತೆ ಕಾಮಗಾರಿಗಳು, ಸೇತುವೆ ಕಾಮಗಾರಿಗಳಿಗೆ ಹಣವನ್ನು ಒದಗಿಸಿರತಕ್ಕಂಥದ್ದು ಕಡಿಮೆ ಎನ್ನುತಕ್ಕಂಥದ್ದು ಅಂಕಿಅಂಶಗಳಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣವೇನು ? ಮೇಜರ್ ಇರಿಗೇಷನ್‌ಗೆ, ಮೈನರ್ ಇರಿಗೇಷನ್ನಿಗೆ, ಪವರ್ ಡೆವಲಪ್‌ಮೆಂಟ್‌ಗೆ ಹಣವನ್ನು ಒದಗಿಸಬೇಕಾದಂಥ ಕಾಲದಲ್ಲಿ ಇದಕ್ಕೆ ಸ್ವಲ್ಪಮಟ್ಟಿಗೆ ಧಕ್ಕೆಯಾಗಿದೆ ಎನ್ನತಕ್ಕಂಥದು ಸ್ಪಷ್ಟ, ಇದರಿಂದಾಗಿ ರಸ್ತೆಗಳನ್ನು ಎಷ್ಟರಮಟ್ಟಿಗೆ ಉತ್ತಮ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿತ್ತೋ ಅಷ್ಟು ಪ್ರಮಾಣದಲ್ಲಿ ಇಟ್ಟುಕೊಳ್ಳುವುದಕ್ಕೆ ಕಷ್ಟವಾಗಿದೆ. ರೂರಲ್ ಕಮ್ಯೂನಿಕೇಷನ್ ಮಾಡಬೇಕೆಂದು ನೀವು ನಾವೆಲ್ಲರೂ ಎಷ್ಟು ಆತುರವಾಗಿ ಮಾಡಲು ಹೊರಟೆವೋ ಆ ಕೆಲಸವು ಸ್ವಲ್ಪ ಕುಂಠಿತವಾಗಿದೆ ಆ ಕೆಲಸ ಏತಕ್ಕೋಸ್ಕರ ಕುಂಠಿತವಾಯಿತು ಎಂಬುವಂಥ ವಿಷಯವನ್ನು ಅರಿತಾಗ ಬಹುಶಃ ನಾನು ಹೇಳತಕ್ಕಂಥ ಮಾತು ಸರಿ ಎನ್ನತಕ್ಕಂಥದ್ದನ್ನು ತಾವು ಒಪ್ಪಲೇಬೇಕಾಗುತ್ತದೆ. ಈಗ ಅಂಕಿ ಅಂಶಗಳನ್ನು ತಮಗೆ ಹೇಳುವುದಾದರೆ ೧೯೭೧-೭೨ರಲ್ಲಿ ೮೩೦ ಲಕ್ಷ ಖರ್ಚಾಗಿದೆ, ೧೯೭೨-೭೩ರಲ್ಲಿ ೮೧೬ಕ್ಕೆ ಇಳಿದಿದೆ, ೧೯೭೩-೭೪ರಲ್ಲಿ ೫೬೩ಕ್ಕೆ ಇಳಿದಿದೆ ಮತ್ತು ಈ ಒಂದು ವರ್ಷ ಡಿಸೆಂಬರ್ ಕೊನೆಯವೇಳೆಗೆ ೩೨೪ಕ್ಕೆ ಇಳಿಯಿತು.

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೇ ಮುಚ್ಚಿ ಬೇಕೆಂದು ಹೇಳಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಏತಕ್ಕೆ ಮುಚ್ಚ ಬೇಕೆಂದು ಹೇಳುತ್ತೀರಿ ಎನ್ನುವ ಉದ್ದೇಶ ಗೊತ್ತಿದೆ. I don't think the Hon. The Leader of the Opposition meant that it should be closed.

ಶ್ರೀ ಕೊಣಂದೂರು ಲಿಂಗಪ್ಪ.—ಅವರಿಗೆ ಸಂಬಳ ಕೊಡುವುದಕ್ಕೆ ಆಗದಿದ್ದ ಮೇಲೆ ಏತಕ್ಕೆ ಇನ್ನೂ ಇಟ್ಟುಕೊಂಡಿದ್ದೀರಿ ?

Sri H. D. Deve Gowda.— More than 50 per cent will go to establishment.

Sri H. M. Channabasappa.—I appreciate the spirit behind your statement. I am sure as a responsible Leader of the Opposition, he

would never come and say; You close the department. So, I take the spirit behind the statement and not the leader of the statement. ಮೇನ್‌ಟೆನೆನ್ಸ್ ಕೂಡ ಏನಾಯಿತು ? ೧೯೭೧-೭೨ರಲ್ಲಿ ೬೩೭ ಲಕ್ಷ ರೂಪಾಯಿ ಇದ್ದುದು, ಮುಂದಿನ ವರ್ಷ ೫೩೭ ಲಕ್ಷಕ್ಕೆ ಇಳಿಯಿತು, ಈ ವರ್ಷ ೩೮೩ ಲಕ್ಷಕ್ಕೆ ಇಳಿಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಗ್ರಹಚಾರ.........

ಶ್ರೀ ಬಿ. ಪುಟ್ಟಸ್ವಾಮಯ್ಯ.—ದರಿದ್ರ ಲಕ್ಷ್ಮಿ ಕಾಲಿಡುತ್ತಾ ಇದ್ದಾಳೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಇದರ ಹಿನ್ನೆಲೆಯನ್ನು ಅರಿತ ಮೇಲೆ, ಇದು ಮಾಡಿರತಕ್ಕಂಥದ್ದು ಸರಿ ಎಂದು ನಿಮ್ಮ ಮನಸ್ಸಿಗೆ ಅನ್ನಿಸಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಮಾಡಿದ್ದು ಸರಿ ಎಂದು ಹೇಳುವುದಕ್ಕೆ ಆಗುತ್ತದೆಯೋ ? ಅದರ ಹಿನ್ನೆಲೆ ಏನು ಎಂಬುದು ಅರ್ಥವಾಯಿತು. ಮಾನ್ಯ ಘೋರ್ಪಡೆಯವರು ಹಣ ಕೊಟ್ಟಿಲ್ಲ ಎಂಬುವ ಹಿನ್ನೆಲೆ ಅರ್ಥವಾಯಿತು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಏತಕ್ಕೆ ದುಡ್ಡು ಕೊಟ್ಟಿಲ್ಲ ? ಮೇಜರ್ ಇರಿಗೇಷನ್, ಮೈನರ್ ಇರಿಗೇಷನ್, ಪವರ್ ಡೆವಲಪ್‌ಮೆಂಟ್‌ಗೆ ಹಣವನ್ನು ಕೊಟ್ಟಿದ್ದಾರೆ ಇದು ಸ್ಪಷ್ಟ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕೈಕಾಲು ಕತ್ತರಿಸಿ ಹಾಕಿದರೂ ಪ್ರಾಣವನ್ನು ಬಿಡಲಿಲ್ಲವಲ್ಲಾ... ,,

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಹೇಗೆ ಹೋಗುತ್ತದೆ ? ಪ್ರಾಣ ಹೋಗುವುದಕ್ಕೆ ಸಾಧ್ಯವಿಲ್ಲ ಇನ್ನು ನ್ಯಾಶನಲ್ ಹೈವೇಸ್ ಬಗ್ಗೆ ಮಾನ್ಯ ದೇವೇಗೌಡರವರು ಹೇಳಿದರು. ನಿನ್ನೆ ಅವರು ಮಾತನಾಡುತ್ತಾ ನೆಲಮಂಗಲದ ರಸ್ತೆ ನೋಡಿದ್ದೀರಾ ಎಂದು ಪ್ರಶ್ನಿಸಿದರು ನಾನು ತಕ್ಷಣವೇ ನೋಡಿದ್ದೇನೆ ಎಂದು ಹೇಳಿ ಅದು ಸರಿಯಾಗಿಲ್ಲ ಎಂದು ತಪ್ಪು ಒಪ್ಪಿಕೊಂಡಿದ್ದೇನೆ ಮತ್ತು ತಪ್ಪನ್ನು ಒಪ್ಪಿಕೊಳ್ಳುವುದರ ಜೊತೆಗೆ ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಯಾವತ್ತೂ ಹಿಂಜರಿಯುವುದಿಲ್ಲ ಎನ್ನತಕ್ಕಂಥದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇಲ್ಲಿ ಯಾವ ರೀತಿ ಸ್ಟೇಟ್ ಬಜೆಟ್‌ನೊಳಗೆ ಸ್ವಲ್ಪ ಹಣವನ್ನು ರಸ್ತೆಗಳಿಗೆ ಹೇಗೆ ಖೋತಾ ಮಾಡಿದ್ದಾರೋ ಅದೇ ಉದ್ದೇಶಕೋಸ್ಕರ ಕೇಂದ್ರ ಸರ್ಕಾರದವರೂ ಕೂಡ ನ್ಯಾಶನಲ್ ಹೈವೇಗೆ ಏನು ಹಣವನ್ನು ಒದಗಿಸುತ್ತಿದ್ದರು ಅವರೂ ಕೂಡ ಅದೇ ಪ್ರಮಾಣದಲ್ಲಿ ಕಡಿಮೆ ಮಾಡಿದ್ದಾರೆ. ಆದುದರಿಂದ ನಾವು ಕೂಡ ಅದಕ್ಕೆ ಸಂಬಂದಪಟ್ಟಂತೆ ಸ್ವಲ್ಪ ಕಡಿಮೆ ಮಾಡಿ ಇರುವುದರೊಳಗೆ ಉತ್ತಮ ಪಡಿಸಿ ಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಅಂದಾಕ್ಷಣ ಇದೇ ರೀತಿ ಹೋಗಬೇಕು ಎಂದು ಹೇಳತಕ್ಕಂಥ ಪ್ರಶ್ನೆ ನನ್ನದಲ್ಲ ಈಗ ನಮ್ಮ ರಾಜ್ಯದಲ್ಲಿ ರತಕ್ಕಂಥ ರಸ್ತೆಯ ವ್ಯವಸ್ಥೆ ಸಾಲದು ಎಂದು ಹೇಳತಕ್ಕಂಥ ನಿಮ್ಮ ಅಭಿಪ್ರಾಯಕ್ಕೆ ನನ್ನದು ಪ್ರೇಮವಿದೆ. ಈಗ ನಮ್ಮ ರಾಜ್ಯದಲ್ಲಿರುವ ಸಾರಿಗೆ ವ್ಯವಸ್ಥೆ ಯಾವ ಪ್ರಮಾಣದಲ್ಲಿ ಇದೆ ಎಂಬುದನ್ನು ತಿಳಿಸಿದರೆ ನಿಮಗೆ ಸ್ವಲ್ಪ ಮಟ್ಟಿಗೆ ಮನಸ್ಸಿಗೆ ಸಮಾಧಾನವಾಗಬಹುದು. ಆಲ್ ಇಂಡಿಯಾ ಅವರೇಜ್ ತೆಗೆದುಕೊಂಡರೆ, ನಮ್ಮಲ್ಲಿ ಒಟ್ಟು ಎಲ್ಲಾ ತರಹದ ರಸ್ತೆಗಳು ೩೪.೪ಕಿಲೋಮೀಟರ್ ಫಾರ್ ಒನ್ ಥೌಸೆಂಡ್ ಸ್ಕ್ವೈಯರ್ ಮೀಟರ್ ಇದೆ. ಸರ್ಫೇಸ್ ರೋಡ್ಸ್ ೧೪.೩೮ ಕಿಲೋ ಮೀಟರ್ ಇದೆ. ಆಲ್ ಇಂಡಿಯಾ ಅವರೇಜ್ ಎಷ್ಟಿದೆ ಎಂದರೆ ೫೧.೬ ೩೪.೪ ಕಿಲೋ ಮೀಟರ್ ಫಾರ್ ಥೌಜೆಂಡ್ ಸ್ಕ್ವೈಯರ್ ಕಿಲೋಮೀಟರ್ ಆಫ್ ಲಾಂಗ್ ರೋಡ್ ಮಾತ್ರ ಸರ್ಫೇಸ್ ರಸ್ತೆ ಒಂದಕ್ಕೆ ಎರಡರಷ್ಟು ಇದೆ. Don't you at least commend the Govenment for this ? I ask the leader of the Opposition. It is done over a period of years; I am not going to take the credit all for myself; but some credit is due to me. Government functions as Government and some portion of the credit is also due to us and to this Government also.

SRI H. D. DEVE GOWDA.—I must compliment you for having told the truth at least.

SRI H. M. CHANNABASAPPA.—To admit the fault and rectify it is also a great quality. ನಿನ್ನೆ ದಿವಸ ಕೆಲವು ಮಾನ್ಯ ಸದಸ್ಯರುಗಳು ರಸ್ತೆಗಳ ನಿರ್ಮಾಣದ ಕಾರ್ಯದ ಬಗ್ಗೆ ಮಾತನಾಡಿದ್ದರು. ಸಿ. ಆರ್. ಎಫ್. ಬಗ್ಗೆ ಸ್ವಲ್ಪ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಆ ವಿಷಯದ ಬಗೆ ಕೆಲವು ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಸೆಂಟ್ರಲ್ ರೋಡ್ ಎಂಡ್ ಇದೆ

ಪೆಟ್ರೋಲ್‌ಗೆ ಎಷ್ಟು ಡ್ಯೂಟಿ ಹಾಕುತ್ತಾರೆಂದರೆ ೧೫ ಪೈಸೆ ಪರ್ ಗ್ಯಾಲನ್ ಡ್ಯೂಟಿ ತೆರಿಗೆ ಹಾಕುತ್ತಾರೆ, ಆ ಡ್ಯೂಟಿಯಿಂದ ಬಂದ ಹಣವೆಲ್ಲಾ ಆ ಅಂಕಿಗೆ ಹೋಗುತ್ತದೆ. ಅದನ್ನು ಎರಡು ಭಾಗ ಮಾಡಿದ್ದಾರೆ, ಒಂದು ಸಿ.ಆರ್.ಎಫ್. ಅಲೋಕೇಷನ್ ಇನ್ನೊಂದು ಸಿ.ಆರ್.ಎಫ್. ರಿಜರ್ವ್ ಎಂದು ಇವೆ. ೨೦ ಪರ್ಸೆಂಟ್ ಸಿ.ಆರ್.ಎಫ್. ರಿಜರ್ವ್‌ಗೆ ಬರುತ್ತದೆ, ೮೦ ಪರ್ಸೆಂಟ್ ಸಿ ಆರ್.ಎಫ್. ಅಲೋಕೇಷನ್‌ಗೆ ಹೋಗುತ್ತದೆ. ಈ ರೀತಿ ಎರಡು ಭಾಗವನ್ನು ಮಾಡಿದ್ದಾರೆ, ಕೇಂದ್ರ ಸರ್ಕಾರದವರು ನಮ್ಮ ರಾಜ್ಯ ಸರ್ಕಾರಗಳಿಂದ ಪ್ರಪೋಜಲ್ಸ್‌ಗಳನ್ನು ೫ ವರ್ಷಕ್ಕೊಂದು ಸಾರಿ ತರಿಸುತ್ತಾರೆ. ನಮಗೆ ಎಷ್ಟು ದುಡ್ಡು ಬರುತ್ತದೆ ಎಂಬುದನ್ನು ನೋಡಿ ಅವರು ಆ ಪ್ರೊಗ್ರಾಮ್‌ಗಳನ್ನು ಅಪ್ರೂವ್ ಮಾಡಿ ಕಳುಹಿಸುತ್ತಾರೆ. ನಮ್ಮ ರಾಜ್ಯದಲ್ಲಿ ಎಷ್ಟೆಷ್ಟು ಫಂಡಿನಿಂದ ಕಲೆಕ್ಟ್ ಆಗುತ್ತದೆ, ಆ ರೀತಿ ಕಲೆಕ್ಟ್ ಆದದ್ದು ಪುನಃ ನಮಗೆ ವಾಪಸ್ಸು ಬರುತ್ತದೆ.

SRI H. D. DEVE GOWDA.—If that is the norms adopted by the Government of India, please give the figures relating to the allocation of this year and the allocations of the previous years ?

5-00 P.M.

SRI H. M. CHANNABASAPPA.—I would be very happy to give any information relation to this at any time, when any Hon. Member wants it. These are all questions of fact which cannot be hidden and there is no purpose in hiding also, I will give you the roads of inter-state of economic importance.

ಇದರಲ್ಲಿ ರೋಡ್ಸ್ ಆಫ್ ಇಂಟರ್‌ಸ್ಟೇಟ್ ಎಕನಾಮಿಕ ಇಂಪಾರ್ಟೆನ್ಸ್‌ನಲ್ಲಿ ಒಂದು ಸೆಕ್ಷೆನ್ ಇದೆ. ಪೂರ್ವದಲ್ಲಿ ನಮಗೆ ಗ್ರಾಂಟ ಇನ್ ಎಯಿಡ್‌ನಿಂದ ಕೊಡುತ್ತಿದ್ದರು. ೧೯೬೪ರಲ್ಲಿ ೫೦ ಪರ್ಸೆಂಟ್ ೧೦೦ ಪರ್ಸೆಂಟ್ ಇತ್ತು. ಈಗ ರೋಡ್ಸ್ ಆಫ್ ಇಂಟರ್‌ಸ್ಟೇಟ್ ಎಕನಾಮಿಕ್ ಇಂಪಾರ್ಟೆನ್ಸ್ ಇದರಲ್ಲಿ ಸಾಲ ಕೊಡುತ್ತಾರೆ. ೧೦೦ಕ್ಕೆ ೧೦೦ ರಷ್ಟು ಸಾಲ ಕೊಡುತ್ತಾರೆ ೧೫ ವರ್ಷಗಳಲ್ಲಿ ತೀರಿಸಬೇಕು. ಆದುದರಿಂದ ಈಗನಾನು ತಮಗೆ ಅಂಕಿ ಅಂಶಗಳನ್ನು ಕೊಟ್ಟಿದ್ದರಲ್ಲಿ ಕರ್ನಾಟಕದಲ್ಲಿ ರಸ್ತೆಗಳ ನಿರ್ಮಾಣ ಭರತಖಂಡದಲ್ಲಿ ಇರತಕ್ಕ ಆವರೇಜ್‌ಗಿಂತ ಸರ್ಫೇಸ್ ರೋಡ್ಸ್ ಎರಡರಷ್ಟು ಇದೆ. ಮತ್ತು ಎಲ್ಲಾ ರಸ್ತೆಗಳು ಸಾರಿಗೆ ಎನ್ನತಕ್ಕದ್ದು ಒಂದೂವರೆಯಷ್ಟು ಇದೆ ಎನ್ನುವುದು ತಮಗೆ ಸ್ಪಷ್ಟವಾಯಿತು. ನಮ್ಮ ರಾಜ್ಯದಲ್ಲಿ ಏನು ಪರಿಸ್ಥಿತಿ ಇದೆ ಎನ್ನುವುದನ್ನು ಕೊಡಬೇಕು. ಒಟ್ಟು ನಮ್ಮಲ್ಲಿ ಎಲ್ಲಾ ರಸ್ತೆಗಳು ಸೇರಿ ೭೯,೯೭೭ ಕಿಲೋಮೀಟರ್ಸ್. ನಿಮಗೆ ಕೊಟ್ಟಿರುವ ಪುಸ್ತಕದಲ್ಲಿ ನ್ಯಾಷನಲ್ ಹೈವೇ ಎಷ್ಟು ಇದೆ, ಅದರಲ್ಲಿ ಎಲ್ಲಾ ವಿಧಿತವಾಗಿದೆ. ೧,೯೫೮ ಕಿಲೋಮೀಟರ್ಸ್ ನ್ಯಾಷನಲ್ ಹೈವೆ, ಆರು ಸಾವಿರ ಜಿಲ್ಲರೆ ಎಂ.ಡಿ ಆರ್; ಓ.ಡಿ ಆರ್. ೯ ಸಾವಿರ ವಿಲೇಜ್ ಪಂಚಾಯಿತಿ. ಪಿ.ಡಬ್ಲ್ಯು.ಡಿ ತಾಲ್ಲೂಕು ಬೋರ್ಡು ಸೇರಿ ೪೮ ಸಾವಿರ ರಸ್ತೆ ಇದೆ. ೨೬ ಸಾವಿರ ಹಳ್ಳಿಗಳಲ್ಲಿ ಒಳ್ಳೆಯ ರಸ್ತೆ ಇರತಕ್ಕಂಥಾದ್ದು ೧೧,೪೩೦ ಹಳ್ಳಿಗಳಿಗೆ ಮಾತ್ರ. ಅನ್‌ಮೆಟಲ್ ರೋಡ್ಸ್, ೧೦,೫೩೦, ರಸ್ತೆ ಇಲ್ಲದೇ ಇರತಕ್ಕದ್ದು ೪,೫೯೬ ಹಳ್ಳಿಗಳು ಇವೆ. ೫ ವರ್ಷಕ್ಕೆ, ೮ ವರ್ಷಕ್ಕೆ ಚೇಂಜ್ ಆಗಬಹುದೇ ವಿನಹ ೧೯೭೨ರಲ್ಲಿ ಎಷ್ಟಿದೆ, ೧೯೭೩ರಲ್ಲಿ ಎಷ್ಟಿದೆ..................

ಶ್ರೀ ಕೆ. ಹೆಚ್. ಹನುಮೇಗೌಡ.—ತಾವು ಅಧಿಕಾರಿಕ್ಕೆ ಬಂದ ಮೇಲೆ ಒಳ್ಳೆಯ ರಸ್ತೆಗಳು ಆಗಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈ ಲೋಕಕ್ಕೆ, ಚಂದ್ರಲೋಕಕ್ಕೆ ರಸ್ತೆ ನಿರ್ಮಾಣ ಮಾಡುವುದಕ್ಕೆ ಆಗಲ್ಲ ಒಂದು ವರ್ಷದಲ್ಲಿ ಎಲ್ಲವನ್ನು ನಿರ್ಮಾಣ ಮಾಡುವುದು ಆಗತಕ್ಕ ಕೆಲಸವಲ್ಲ. ರೂರಲ್ ಕಮ್ಯುನಿಕೇಷನ್ ವಿಷಯದಲ್ಲಿ ಬಹಳಮಟ್ಟಿಗೆ ಚರ್ಚೆ ಆಯಿತು. ತಮಗೆ ಎಷ್ಟು ಅಭಿಮಾನ ಹಳ್ಳಿಗಳ ಮೇಲೆ ಇದೆ ಎನ್ನತಕ್ಕಂಥಾದ್ದರ ಬಗ್ಗೆ ನನ್ನ ಸಂಪೂರ್ಣ ಪ್ರಸಂಸೆ ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ —ಮಂಗ ಮಂಗ ಎಂದು ತಟ್ಟಬೇಡಿ, ಕೈಯಲ್ಲಿ ಎಣ್ಣೆ ಇಲ್ಲ. ನಮ್ಮಲ್ಲಿ ಏನೂ ಆಗಿಲ್ಲ ಗುದ್ದಲಿ ಪೂಜೆ ಮಾಡಿದ್ದು ಎಲ್ಲಿ ಹೋಯಿತ್ತು? ಅಷ್ಟು ಲಘುವಾಗಿ ಹೇಳಬೇಡಿ, ಜವಾಬ್ದಾರಿಯಿಂದ ಮಾತನಾಡಿ.

ಶ್ರೀ ಕೆ. ಹೆಚ್, ಹನುಮೆಗೌಡ,– ಊರು ಕಡೆ ಹೋಗುವುದನ್ನೇ ಬಿಟ್ಟೆವು,

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಾವು ನೀವು ಉಭಯತ್ರರು ಮಾಡೋಣ ಸಿ.ಐ.ಆರ್. ಇಂಟಿಗ್ರೇಟೆಡ್ ಪ್ರೋಗ್ರಾಂನಲ್ಲಿ ೧-೪-೯೭೪ರಲ್ಲಿ ೫ ಕೋಟಿ ೧೨ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಈ ವರ್ಷ ಹಣ ಇಲ್ಲದೇ ಇದ್ದಾಗ್ಯೂ ಒಂದು ಕೋಟಿ ೧೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಒಟ್ಟು ಎರಡು ವರ್ಷಗಳಲ್ಲಿ ಆರು ಕೋಟಿ ೨೨ ಲಕ್ಷ ರೂಪಾಯಿ ವಿಲೇಜ್ ಕಮ್ಯುನಿಕೇಷನ್‌ಗೆ ಖರ್ಚು ಮಾಡಿದ್ದೇವೆ. ಅಂದರೆ ಎಲ್ಲಾ ಕೆಲಸ ಮುಗಿದುಹೋಯಿತು ಎಂದು ಹೇಳುವುದಿಲ್ಲ. ಸಿ.ಡಿ. ವರ್ಕ್ಸ್ ಇದೆ. ಫಾರ್ಮೇಷನ್‌ಗೆ ಅಷ್ಟು ಖರ್ಚಾಗಿದೆ. ಒಟ್ಟು ರಸ್ತೆಗಳು ೧೫.೭೮೬ ಕಿಲೋಮೀಟರ್ಸ್. ಪ್ರೂವ್ ಮಾಡಿ ಸಭೆಯುಮುಂದೆ ಇಟ್ಟಿದ್ದೆವು. ಇದರೊಳಗೆ ೧೪.೨೪೧ ಉದ್ದ ರಸ್ತೆಯನ್ನು ಪ್ರಾರಂಭ ಮಾಡಿದ್ದೇವೆ. ೧೫,೭೮೬ರಲ್ಲಿ ಕೇವಲ್ಲ ಅಲ್ಪಸ್ವಲ್ಪ ಮಾತ್ರ ಪ್ರಾರಂಭ ಮಾಡಿದೆ. ೧,೫೮೫ ಕಿಲೋಮೀಟರ್ಸ್ ಟ್ಯಾಕಲ್ ಆಗಿವೆ.

ಶ್ರೀ ಹೆಚ್. ಡಿ. ದೇವೇಗೌಡ.—ನಮ್ಮಲ್ಲಿ ಒಂದು ಕಿಲೋಮೀಟರ್ಸ್ ರಸ್ತೆ ಕೂಡ ಮಾಡಿಲ್ಲ,

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಟ್ಯಾಕಲ್ ಮಾಡಿದ್ದೇವೆ ಎಂದರೆ, ಮುಗಿಸಿದ್ದೇವೆ ಎಂದು ಅರ್ಥವಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಹುಣಸೂರಿನಲ್ಲಿ ಎಷ್ಟು, ಪೆರಿಯಾಪಟ್ಟಣದಲ್ಲಿ ಎಷ್ಟು ಅದು ಕೊಡಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ತಾಲ್ಲೂಕ್‌ವಾರ್, ಡಿಸ್ಟ್ರಿಕ್ಟ್‌ವಾರ್ ಬೇಕಾದರೂ ಕೊಡುತ್ತೇವೆ. ಆದರೆ ಈಗ ಇರತಕ್ಕ ಒಂದು ಗಂಟೆಯೊಳಗೆ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಈ ತರಹ ಹಾರಿಕೆ ಉತ್ತರ ಕೊಡುವುದು ಬೇಡ, ಸ್ಪಷ್ಟವಾದ ಅಂಕಿಅಂಶಗಳನ್ನು ಕೊಡಿ. ನಾಳೆ ಕೊಡುತ್ತೀರಾ?

SRI H. M, CHANNABASAPPA.—It is not as though I am running away after making the statement. I am going to be here for another one or two years.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗೆ ಹೇಳಬೇಡಿ, ಧಾರಿಯೂ ಏನಾದರೂ? ತಾವು ಹಾಗೆ ಆಗುವುದಕ್ಕೆ ಸಾಧ್ಯವಿದೆ.

ಶ್ರೀ ಹೆಚ್, ಎಂ. ಚನ್ನಬಸಪ್ಪ.—ನಾನು ಹೋಗಬೇಕೂಂತ ತಮ್ಮ ಇಚ್ಛೆಯೇ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹೋಗಬೇಕು ಅನ್ನುವ ಇಚ್ಛೆ ಇಲ್ಲದೇ ಇದ್ದರೂ, ತಮಗೆ ಯಾರನ್ನಾದರೂ ಕಳಿಸಬೇಕು ಅನ್ನುವ ಇಚ್ಛೆಯೇ?

ಅಧ್ಯಕ್ಷರು.—ಯಾರೂ ಹೋಗಬೇಡಿ, ರೋಡ್ ಮಾಡಿಸಿಕೊಳ್ಳಿ.

ಶ್ರೀ ಹೆಚ್. ಎಂ, ಚನ್ನಬಸಪ್ಪ.—ಸುಮಾರು ಆರು ಕೋಟಿ ೨೦ ಲಕ್ಷ ರೂಪಾಯಿ ಖರ್ಚು ಮಾಡಿ, ೭,೫೮೦ ಕಿಲೋಮೀಟರ್ಸ್ ರಸ್ತೆ ಪೂರ್ತಿ ಆಗಿದೆ. ಇದರ ಜೊತೆಯೊಳಗೆ ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿ ಐದು ವರ್ಷದಲ್ಲಿ ತೆಗೆದುಕೊಳ್ಳಬೇಕು. ೫೦೧ ಹಳ್ಳಿಗಳಿಗೆ ಸಂಪರ್ಕ ಕೊಡಬೇಕು, ೨,೮೪೪ ಕಿಲೋಮೀಟರ್ಸ್ ರಸ್ತೆ ಮಾಡಬೇಕು, ಐದುವರ್ಷದಲ್ಲಿ ೧೦ ಕೋಟಿ ರೂಪಾಯಿ ಖರ್ಚು ಮಾಡಬೇಕೆಂಬ ಯೋಚನೆ ಇದೆ.

ಶ್ರೀ ಕೆ. ಹೆಚ್. ಹನುಮೇಗೌಡ ಈ ವರ್ಷ ಕೊಟ್ಟ ದುಡ್ಡು, ಎಸ್ಟಿಮೇಟ್ ಸ್ಯಾಂಕ್ಷನ್ ಆಗಿದೆ. ಲ್ಯಾಪ್ಸ್ ಆಗುತ್ತಾಇದೆ.

ಶ್ರೀ ಹೆಚ್.ಎಂ. ಚನ್ನಬಸಪ್ಪ.—ಮೊದಲು ಫಾರ್ಮೇಷನ್ ಆಗಬೇಕು, ಕೆಲವು ಕಾಲ ಸಡಿಲ ಆಗಬೇಕು, ಅದರ ಮೇಲೆ ಜಲ್ಲಿ ಹಾಕಬೇಕು ಆಮೇಲೆ ಟಾರ್ ಹಾಕಬೇಕುಎಲ್ಲಾಹಂತಹಂತವಾಗಿ ಆಗಬೇಕು. I am watchful over every aspect of it and I dont allow a single pie to go. On the behalf of the Hon. Member I am speaking.

ಶ್ರೀ ಕೆ. ಹೆಚ್. ಹನುಮೇಗೌಡ.—ತಾವು ಹೇಳಿದ ಪ್ರೋಗ್ರಾಂ ಪ್ರತಿ ಊರಿಗೂ ಇದೆಯೇ?

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಹೌದು.

ಶ್ರೀ ಕೋಣಂದೂರು ಲಿಂಗಪ್ಪ.—ಅಂಕಿ ಅಂಶಗಳನ್ನು ಕೊಡಬೇಕು.

SRI H. M. CHANNABASAPPA.—I am giving whatever information the Hon. Member wants, relating to Thirthhaalli, Soraba, Sagar and every taluk.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಈ ಸಭೆಯ ಆಯಸ್ಸು ಎರಡು ವರ್ಷ ಇದೆ, ಸಂತೋಷ ಆದರೆ ತಮಗೆ ಅಧಿಕಾರ ಇರುತ್ತದೋ ಇಲ್ಲವೋ ಗೊತ್ತಿಲ್ಲ, ಕರ್ನಾಟಕ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಹೇಗೆ ಮಾಡುತ್ತೀರಾ ಸ್ಪಷ್ಟವಾಗಿ ಹೇಳಿ. ಮೊನ್ನೆ ಪತ್ರಿಕೆಯಲ್ಲಿ ಓದಿದೆ ಟಾರ್ ಬಳಿದು, ಕೆರದಲ್ಲಿ ಹಾಕಿದರು ಎಂದು ಜನ ಎಚ್ಚತ್ತಿದ್ದಾರೆ, ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ, ಕರ್ನಾಟಕದ ಗ್ರಾಮಾಂತರ ಪ್ರದೇಶಗಳಿಗೆ ತಾವು ಏನು ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟಪಡಿಸಿ?

ಶ್ರೀ ಕೆ. ಹೆಚ್. ಹನುಮೇಗೌಡ.—ಮಂತ್ರಿಗಳು ಬಂದರೆ ನಮ್ಮ ಊರುಗಳಿಗೆ ಕೆಲಸ ಆಗದೇ ಇರುವುದಕ್ಕೆ ನಮ್ಮ ಎಂ. ಎಲ್. ಎ. ಗಳಿಗೆ ದಕ್ಷತೆ ಕಡಿಮೆ ಎಂದು ಹೇಳುತ್ತಾರೆ, ಯಾರದು ದಕ್ಷತೆ ಕಡಿಮೆ?

ಹಳ್ಳಿಗಾಡಿನಲ್ಲಿ, ಎಲ್ಲಾ ಹಳ್ಳಿಗಳಿಗೂ ಒಂದು ನಿರ್ದಿಷ್ಟ ಕಾಲದಲ್ಲಿ ರಸ್ತೆಗಳು ಆಗಬೇಕು ಎಂದು ಸರ್ಕಾರ ಪಣ ತೊಟ್ಟಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಚುನಾವಣೆಯ ಸ್ಟಂಟ್.

ಹೆಚ್. ಎಂ. ಚನ್ನಬಸಪ್ಪ.—ನಾನು ೨ ವರ್ಷದ ಹಿಂದೆಯೇ ಹೇಳಿದ್ದೇನೆ. ೧೦ ವರ್ಷದ ಹಿಂದೆಯೂ ಹೇಳಿದ್ದೇನೆ. ಇದರಲ್ಲಿ ವಿಷಯ ಏನಿದೆ ಎಂದರೆ ಹಳ್ಳಿಗಾಡಿನ ರಸ್ತೆಗಳಿಗೆ ಹೆಚ್ಚು ಗಮನಕೊಡುತ್ತಾ ಇಲ್ಲ ಎನ್ನುವುದು ಸ್ಪಷ್ಟವಾದ ವಿಷಯ ಅನೇಕ ವರ್ಷಗಳಿಂದ ಇದೆ. ಈಗಲೂ ಕೂಡ ಹಳ್ಳಿಗಾಡಿನ ರಸ್ತೆಗಳು ಸಾರೋದ್ಧಾರವಾಗಿ ನಡೆದೇ ತೀರಬೇಕು, ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ಸರ್ಕಾರ ಯೋಚಿಸಿದೆ, ನಾವು ಇಡೀ ರಾಜ್ಯದಲ್ಲೇ ಇರತಕ್ಕ ಪ್ರತಿಯೊಂದು ಹಳ್ಳಿಗೂ ಒಂದು ಆಲ್‌ವೆದರ್ ರೋಡ್‌ಆಗಬೇಕು. ಅದಕ್ಕೆ ಒಂದು ಯೋಜನೆ ಮಾಡಬೇಕು ಎಂದು ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ಇದು ೩ನೇ ವರ್ಷದ ಘೋಷಣೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈಗ ಪ್ರತಿವರ್ಷ ರಾಜ್ಯದ ಬೊಕ್ಕಸದಿಂದ ಬಜೆಟ್‌ನಲ್ಲಿ ರೂರಲ್ ಕಮ್ಯೂನಿಕೇಷನ್‌ಗೆ ಹಣ ಒದಗಿಸಿದರೆ ಒಂದು ವರ್ಷ ಹೆಚ್ಚಿಗೆ ಕೊಡುತ್ತಾರೆ, ಒಂದು ವರ್ಷ ಕಡಿಮೆ ಕೊಡುತಾರೆ, ಒಂದುವರ್ಷ ಇರುವುದಿಲ್ಲ. ಆ ರೀತಿ ಆಗಬಾರದು. ರೂರಲ್‌ಕಮ್ಯೂನಿಕೇಷನ್‌ನ ಆರ್ಥಿಕ ಬೆಳವಣಿಗೆ ಮಾರ್ಕೆಟಿನ ಬೆಳವಣಿಗೆ ರಕ್ತನಾಳಗಳು ಎಂದು ಹೇಳಿದಮೇಲೆ ಅವು ಆಗಲೇಬೇಕು. ಅದಕ್ಕೆ ತಕ್ಕ ವಿಶೇಷ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರ ಯೋಚಿಸಿದೆ. ಇದಕ್ಕೆ ತಮ್ಮ ಸಂಪೂರ್ಣ ಬೆಂಬಲ ಒದಗಿಸುವುದಾದರೆ ನಾಳೆ ಸೆಷನ್‌ನಲ್ಲೆ ತಂದು ನಾಳಿದ್ದು ಜಾರಿಗೆ ಕೊಡುತ್ತೇನೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ನಮಗೆ ಬಹಳ ಅನುನಮಾಸವಾಗಿದೆ.

ಶ್ರೀ ಎಚ್. ಎಂ. ಚನ್ನಬಸವಪ್ಪ.— ನಂಬಬೇಕು, ನಂಬಿ ಕೆಟ್ಟವರಿಲ್ಲ. ನಂಬದೆ ನಂಬದೆ ಇರುವವರು ಕೆಟ್ಟು ಹೋದರು.

ಶ್ರೀ ಬಿ. ಪುಟ್ಟಸ್ವಾಮಯ್ಯ —ಪುನಃ ನಮ್ಮ ಕೈಯಲ್ಲಿ ಗುದ್ದಲಿ ಪೂಜೆ ಮಾಡಿಸುವುದಿಲ್ಲ ತಾನೆ;

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದಕ್ಕೋಸ್ಕರ ಒಂದು ವರಮಾನವನ್ನು ಬೇರೆ ಕಡೆಯಿಂದ ಕಟ್ಟಿ ಟ್ಟು ಲ್ಯಾಪ್ಸ್ ಆಗದ ರೀತಿಯಲ್ಲಿ ನಾನ್ ಲ್ಯಾಪ್ಸಿಯಬಲ್ ಫಂಡ್ ಫಾರ್ ರೂರಲ್ ಕಮ್ಯೂನಿಕೇಷನ್ ಎಂದು ಒಂದು ವ್ಯವಸ್ಥೆಯನ್ನು ಮಾಡಿ-- ಫಂಡಿನ ಉತ್ಪತ್ತಿ ಒಂದು ಕಡೆ ಹೆಚ್ಚಿಗೆ ಮಾಡುವುದು, ಇನ್ನೊಂದು ಕಡೆ ಕಡಿಮೆ ಮಾಡುವುದು ಆ ರೀತಿ ಆಗಬಾರದು—ಪ್ರತಿಯೊಂದು ಜಿಲ್ಲೆಗೂ ಕೂಡ.

ಶ್ರೀ ಕೋಣಂದೂರು ಲಿಂಗಪ್ಪ.— ವಾಡಿಕೆಗೆ ತಪ್ಪಿ ಹೆಚ್ಚಿ ಮೂರು ವರ್ಷ ಆಯಿತು. ಈ ರೀತಿ ಭರವಸೆಕೊಡಬೇಕಾಗಿಲ್ಲ. ನೀವು ಮೂರು ವರ್ಷದಿಂದ ಮಾಡಿರುವುದು ಏನು? ೩ ವರ್ಷದಿಂದ ಇದೇ ರೀತಿ ಹೇಳುತ್ತಿದ್ದೀರಿ.

ಅಧ್ಯಕ್ಷರು.—ಬಜೆಟ್ ಮೈನ್‌ಟೆನ್ ಮಾಡುವುದಕ್ಕೆ ಹೊಸ ಟ್ಯಾಕ್ಸ್ ಹಾಕುತ್ತಾರೆ. ರೋಡ್‌ಗೆ ಇನ್ನೊಂದು ಟ್ಯಾಕ್ಸ್ ಹಾಕುತ್ತಾರೆ. ನೀವು ಒಪ್ಪಿಕೊಳ್ಳದಿದರೆ ಹೇಗೆ ಮಾಡುತ್ತಾರೆ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ದಯವಿಟ್ಟು ಪೂರ್ತಿಯಾಗಿ ಕೇಳಿ ಏನಾದರೂ ಅಭಿಪ್ರಾಯ ಇದ್ದರೆ ಹೇಳಿ. ಇದಕ್ಕೋಸ್ಕರ ಒಂದು ನಾನ್ ಲ್ಯಾಪ್ ಬಲ್ ಫಂಡ್ ಕ್ರಿಯೇಟ್ ಮಾಡಿ ಇದು ಏರು ಪೇರಿಗೆ ಒಳಪಡಬಾರದು. ಈ ಫಂಡ್ ಒಂದೇ ಇರಲ್ಲಿ, ೨ ಇರಲ್ಲಿ, ೩ ಇರಲ್ಲಿ, ೪ ಇರಲ್ಲಿ, ಉತ್ಪತ್ತಿ ಏನು ಬರುತ್ತದೆ ಆ ಉತ್ಪತ್ತಿಯನ್ನು ಇವರಲ್ಲಿ ಇಟ್ಟು ಜಿಲ್ಲಾವಾರು ವರಮಾನದಲ್ಲಿ ಎಷ್ಟು ವಿತರಣೆ ಇದೆ ಅದಕ್ಕ ನುಗುಣವಾಗಿ ಜಿಲ್ಲಾವಾರು ಹಂಚಿಕೆ ಮಾಡಿ ಕೆಲಸ ಮಾಡತಕ್ಕದು. ಯಾವ ಯಾವ ರಸ್ತೆಗೆ ಎಷ್ಟು ಖರ್ಚು ಮಾಡಬೇಕು; ಹೇಗೆ ಮಾಡಬೇಕು ಎಂಬುದನ್ನು ಜಿಲಾಮಟ್ಟದಲ್ಲಿ ತಾಲ್ಲೂಕು ಪ್ರತಿನಿಧಿಗಳು ಇದ್ದಾರೆ, ಎಂಪಿ. ಗಳು ಇದ್ದಾರೆ, ಎಂಎಲ್. ಸಿಗಳು ಇದ್ದಾರೆ. ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಇದ್ದಾರೆ ಇವರೆಲ್ಲರೂ ಸೇರಿ ರಸ್ತೆಗಳನ್ನು ಯಾವರೀತಿ ವ್ಯವಸ್ಥೆ ಮಾಡಬೇಕು ಎಂಬುದರ ಬಗ್ಗೆ ಸರ್ಕಾರ ಕ್ಕೆ ಒಂದು ಯೋಜನೆ ಇದೆ. ಇದಕ್ಕೆ ಕೊನೆಯಪಕ್ಷ ತಾಲ್ಲೂಕಿಗೆ ೨ ಲಕ್ಷ ರೂಪಾಯಿ ಪ್ರತಿವರ್ಷ ಬರುತಿದ್ದರೆ, ಬರುವ ಉತ್ಪತ್ತಿಯೆಲ್ಲವನ್ನು ರಸ್ತೆಗಳಿಗೆ ಮಾತ್ರ ಮುಡಿಪಾಗಿ ಇಟ್ಟರೆ ಆಗ ಕೆಲವಾರು ವರ್ಷ ಗಳಲ್ಲಿ ಎಲ್ಲಾ ಹಳ್ಳಿಗಳಿಗೂ ಉತ್ತಮವಾದ ರಸ್ತೆ ಆಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ರಸ್ತೆಯ ಮೇಲೆ ಹೋಗುವವರ ಮೇಲೆ ಟ್ಯಾಕ್ಸ್ ಹಾಕುತ್ತಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದಕ್ಕೋಸ್ಕರವಾಗಿ ರೆಗ್ಯುಲೇಟೆಡ್ ಮಾರ್ಕೆಟ್ ಡವಲಪ್‌ಮೆಂಟ್ ಇದೆ. ಈ ರೆಗ್ಯುಲೇಟೆಡ್ ಮಾರ್ಕೆಟ್ ಡೆವಲಪ್‌ಮೆಂಟ್ ಬಗ್ಗೆ ಈಗ ಜನ ಏನು ತಿಳಿದುಕೊಂಡಿದ್ದಾರೆ ಎಂದರೆ, ಸೊಗಸಾದ ಸೌಧಗಳನ್ನು ಗೆಸ್ಟ್‌ಹೌಸ್‌ಗಳನ್ನು ಕಟ್ಟುವುದಕ್ಕೆ, ಮೋಟಾರ್‌ನಲ್ಲಿ ಓಡಾಡುವುದಕ್ಕೆ ಇದೆಯೆಂದು ಜನರು ತಿಳಿದುಕೊಂಡಿದ್ದಾರೆ. ಮುಖ್ಯವಾಗಿ ರೆಗ್ಯುಲೇಟೆಡ್ ಡೆವಲಪ್‌ಮೆಂಟ್ ಎಂದರೆ ಯಾರ ಉಪಯೋಗಕ್ಕೋಸ್ಕರ ರೆಗ್ಯುಲೇಟೆಡ್ ಮಾರ್ಕೆಟ್ ಇದೆ ಅವರು ತಮ್ಮ ದವಸಧಾನ್ಯಗಳನ್ನು ರೆಗ್ಯುಲೇಟೆಡ್ ಮಾರ್ಕೆಟಿನಿಂದ ತರುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿಕೊಡುವುದೇ ಆಗಿದೆ. That is the real devel pment work in rhe regulated market. ರೆಗ್ಯುಲೇಟೆಡ್ ಮಾರ್ಕೆಟ್ ಅನೇಕ ಕಡೆ ಹಣವನ್ನು ಹೆಚ್ಚಾಗಿ ಹಾಕಿ ತಾವು ಏನು ಮಾಡಬೇಕು ಎಂಬುದು ಗೊತ್ತಿರುವುದಿಲ್ಲ. ಮೋಟಾರುಗಳನ್ನು ತೆಗೆದುಕೊಳ್ಳುತ್ತಾರೆ, ಬೆಂಗಳೂರು, ಮೈಸೂರು, ಹೈದರಾಬಾದ್ ಕಡೆಗಳಲ್ಲಿ ಟೂರ್ ಹಾಕುತ್ತಿದ್ದಾರೆ. ಇದು ನಿಲ್ಲಬೇಕು. ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಅವರಿಗೆ ಡೆಲಿವರಿ ಏನು ಇದೆ ಅದರ ಮೇಲೆ ಶೇಕಡ ಒಂದರಷ್ಟು ಸೆಸ್‌ಹಾಕಿ ಆದರಿಂದ ಪ್ರತಿವರ್ಷ ೩—೪ ಕೋಟಿ ರೂಪಾಯಿ ಬರುತ್ತದೆ ಎಂದು ಅಂದಾಜಾಗಿದೆ. ಇದು ಕೇವಲ ಗ್ರಾಮಾಂತರ ಜನಗಳ ಅನುಕೂಲಕ್ಕೋಸ್ಕರ ರೆಗ್ಯುಲೇಟೆಡ್ ಮಾರ್ಕೆಟ್ ಇರುವುದರಿಂದ ಅವರಿಗೆ ಅವಶ್ಯಕವಾದ ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡತಕ್ಕದ್ದು it is justifiable tax on the regulated markets. ಅದಕ್ಕೋಸ್ಕರವಾಗಿ ನಾನು ಇಷ್ಟೆಲ್ಲಾ ಹೇಳುತ್ತಿದ್ದೇನೆ. ನನ ಅನಿಸಿಯೂ ಅದೇ ರೀತಿ ಇದೆ. ದಿನಕ್ರಮೇಣದಲ್ಲಿ ಹಣ ಲ್ಯಾಪ್ಸ್ ಆಗುವ ಪ್ರಶ್ನೆ ಇಲ್ಲ. ತೀರ್ಥಹಳ್ಳಿಯಲ್ಲಿ ೨ ಲಕ್ಷ ರೂಪಾಯಿ ಕೊಡಿಸಿ, ಪ್ರತಿವರ್ಷ ೧½ ಲಕ್ಷ ರೂಪಾಯಿ ಖರ್ಚಾದರೂ ½ ಲಕ್ಷ ಉಳಿದಕೊಳುತ್ತದೆ. ಮುಂದಿನ ವರ್ಷ ೩½ ಲಕ್ಷ ಬಂದರೆ ೪ ಲಕ್ಷ ಆಗುತ್ತದೆ. ಟಾರ್ ಹಾಕಿಸಿ, ಸಿಮೆಂಟ್ ಹಾಕಿಸಿ, ಆ ರೀತಿ ಶಾಶ್ವತವಾದ ವ್ಯವಸ್ಥೆಯಿಂದ ಸೆಸ್ ಹಾಕುತಾರೆ ಎಂದು ಭಯ ಪಡಬೇಕಾಗಿಲ್ಲ ಅನೇಕ ಸೆಸ್ ಟ್ಯಾಕ್ಸ್ ಹಾಕುತ್ತಾರೆ. ಎಲ್ಲಿ ಹೋಗುತ್ತದೆ? ಜನರಲ್ ಫೂಲ್‌ಗೆ ಹೋಗುತ್ತದೆ. ನಮ್ಮ ಹಳ್ಳಿಗಳಿಗೆ ಬರುವುದಿಲ್ಲ. ನೇರವಾಗಿ ಹಳ್ಳಿಯ ಜನಗಳಿಗೆ ಬರತಕ್ಕದ್ದು ಇದೆ. ಇವತ್ತು ಕೊಟ್ಟಿದ್ದು ನಾಳೆ ಹೋಗುವುದಿಲ್ಲ. ಅಲ್ಲೇ ಉಳಿಯುತ್ತದೆ. ನಮಗೆ ಬೇಕಾದ ಹಾಗೆ ಖರ್ಚಾಗತಕ್ಕದ್ದು ಇದೆ. ಮಾನ್ಯಸದಸ್ಯರು ಒಪ್ಪುವುದಾದರೆ ಇದೇ ಸೆಷನ್‌ನಲ್ಲಿ ಪಾಸ್ ಮಾಡಿ ಈ ವರ್ಷ ಕೆಲಸ ಪ್ರಾರಂಭ ಮಾಡುತ್ತೇನೆ, I have the sanction of the House.

ಶ್ರೀ ಎಸ್. ಬಂಗಾರಪ್ಪ.—ಒಂದೊಂದು ತಾಲ್ಲೂಕಿಗೆ ೨ ಲಕ್ಷ ಕಡಿಮೆ ಎಂದರೂ ಇಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ —೨½ ಕೋಟಿ ಬಂದರೆ ತಾಲ್ಲೂಕಿಗೆ ೨ ಲಕ್ಷ, ೪ ಕೋಟಿ ಬಂದರೆ ೨½ ಲಕ್ಷ ಕೊಡುತ್ತೇವೆ. ಬೇರೆ ಎಲ್ಲೂ ಕೊಡುವುದಿಲ್ಲ. ಫಂಡಿನಲ್ಲಿ ಇರುತ್ತದೆ ಈಕ್ವಲ್ ಡಿಸ್ಟ್ರಿಬ್ಯೂಷನ್ ಮಾಡಬೇಕಾಗುತ್ತದೆ. ಬಿಜಾಪುರ ಒಂದೇ, ಶಿವಮೊಗ್ಗ ಒಂದೇ ಎಂದು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ಅದು ಏರಿಯಾ ಮೇಲೆ ಹೋಗುತ್ತದೆ. ಈ ಏರಿಯಾಕ್ಕಿಂತ ಬಿಜಾಪುರ ದೊಡ್ಡದು, ಅದಕ್ಕೆ ಹೆಚ್ಚು ಕೊಡಬೇಕಾಗುತದೆ. ೬೦ ಇಂಚು ಮಳೆ ಬರುವ ಏರಿಯಾದಿಂದ ೩ ಕೋಟಿಯಿಂದ

೩½ ಕೋಟಿ ಬರುತ್ತದೆ. ಇದು ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಪ್ರತಿವರ್ಷ ಉತ್ಪತ್ತಿ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಆದರೂ ಕೂಡ ರಸ್ತೆ ಮಾಡುವಾಗ ೬೦ ಇಂಚು ಮಳೆ ಬರುವ ಅಂದರೆ ಮಲೆನಾಡು ಏರಿಯಾ ಅವುಗಳಿಗೆ ಸಹಾಯ ಕೊಡಬೇಕು ಎಂದು ಸರ್ಕಾರದ ಅಭಿಪ್ರಾಯ ಇದೆ.

ಮಲೆನಾಡಿನಲ್ಲಿ ರಸ್ತೆಗಳ ಸರ್ಫೇಸಿಗೆ ಹೆಚ್ಚು ಖರ್ಚು ಮಾಡಬೇಕಾಗುತ್ತದೆ, ಸೇತುವೆಗಳಿಗೆ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಆದುದರಿಂದ ಮಲೆನಾಡಿಗೆ ಸ್ವಲ್ಪ ಹೆಚ್ಚು ವೇಟೇಜ್ ಕೊಡಬೇಕೆಂದು ಇದ್ದೇವೆ. ಮಾನ್ಯ ಸಭೆ ಇದಕ್ಕೆ ಒಪ್ಪುವುದಾದರೆ ಒಂದು ಮಸೂದೆಯನ್ನು ಇದೇ ಅಧಿವೇಶನದಲ್ಲಿ ತಂದು ಈ ವರ್ಷ ದಿಂದಲೇ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತೇವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಇದಕ್ಕೆ ಸಭೆಯ ಒಪ್ಪಿಗೆ ಇದೆ ಎಂದು ಭಾವಿಸುತ್ತೇನೆ.

ಕೆಲವು ಮಾನ್ಯ ಸದಸ್ಯರು.—ಆಗಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಚುನಾವಣಾ ಘೋಷಣೆಯಾಗಬಾರದು ಅಷ್ಟೇ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಯಾವಾಗಲೂ ಅದೇ ಮಂತ್ರ.

ಶ್ರೀ ಎಚ್ ಎಂ. ಚನ್ನಬಸಪ್ಪ — ಒಂದು ಸಂತೋಷದ ಸಂಗತಿಯನ್ನು ನಾನು ತಿಳಿಸುತ್ತೇನೆ. ಸೇತುವೆಗಳ ವಿಷಯ ಏನು ಮಾಡಿದಿರಿ ಎಂದು ಕೇಳಿದರು. ಹಣಕಾಸಿನ ಸಚಿವರು ಈಗಾಗಲೇ ಒಂದು ಘೋಷಣೆಯನ್ನು ಮಾಡಿದ್ದಾರೆ. ರೋಡ್ಸ್ ಅಂಡ್ ಬ್ರಿಜಸ್‌ಗೆ ೨ ಕೋಟಿ ೬೦ ಲಕ್ಷ ರೂಪಾಯಿ ಇಟ್ಟಿರುವುದಾಗಿ ಹೇಳಿದ್ದಾರೆ ೬೦ ಲಕ್ಷ ರೂಪಾಯಿ ಷುಗರ್‌ಕೇನ್ ರಸ್ತೆಗಳಿಗೆ ಮುಂಡುಪಾಗಿಡಬೇಕು. ಎರಡು ಕೋಟಿ ರೂಪಾಯಿಗಳನ್ನು ಸೇತುವೆಗಳಿಗಾಗಿ ಖರ್ಚು ಮಾಡಬೇಕು ಎಂದು ಸರ್ಕಾರ ಯೋಚನೆ ಮಾಡಿದೆ. ಈಗ ನಾವು ಕೊಡುತ್ತಿರತಕ್ಕ ಹಣ ಸೇತುವೆಗಳಿಗೆ ಯಾವುದಕ್ಕೂ ಸಾಲದು. ರಾಜ್ಯದಲ್ಲಿನ ರಸ್ತೆ ಮತ್ತು ಸೇತುವೆಗಳಿಗೆ ಈ ಹಣ ಖರ್ಚಾಗಬೇಕು ಎನ್ನುವ ವ್ಯವಸ್ಥೆ ಮಾಡಿದರೆ ತಕ್ಷಣ ಅನೇಕ ಸೇತುವೆಗಳು ಆಗುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಮೇನಟನೆನ್ಸ್‌ಗೆ ಈ ವರ್ಷ ಹೆಚ್ಚು ಹಣವನ್ನು ಒದಗಿಸಿದ್ದಾರೆಂದು ಬಹಳ ಸಂತೋಷದಿಂದ ಹೇಳುತ್ತೇನೆ. ಹೋದ ಸಲ ಮೇನ್‌ಟೆನ್ಸ್‌ಗೆ ಇಟ್ಟಿದ್ದ ಆರು ಕೋಟಿ ರೂಪಾಯಿಗಳಲ್ಲಿ ಎರಡು ಕೋಟಿ ರೂಪಾಯಿ ರೂರಲ್ ಕಮ್ಯುನಿಕೇಷನ್‌ಗೆ ತೆಗೆದ ಮೇಲೆ ಉಳಿದ ನಾಲ್ಕು ಕೋಟಿ ರೂಪಾಯಿಗಳಲ್ಲಿ ಇಷ್ಟು ದೊಡ್ಡ ಪ್ರಮಾಣದ ರಸ್ತೆಗಳನ್ನು ರಿಪೇರಿ ಮಾಡಬೇಕಾಗಿ ಬಂದು ರಸ್ತೆಗಳು ಸ್ವಲ್ಪ ಕೆಡವುದಕ್ಕೆ ಕಾರಣವಾಯಿತು. ಈ ವರ್ಷ ಮೇನ್‌ಟೆನೆನ್ಸ್‌ಗಾಗಿಯೇ ೮—೯ ಕೋಟಿ ರೂಪಾಯಿ ಸಿಕ್ಕುತ್ತದೆ. ಇದರಿಂದಾಗಿ ಏನೇನು ರಸ್ತೆಗಳು ಎಲ್ಲೆಲ್ಲಿ ಕೆಟ್ಟು ಹೋಗಿವೆ ಎಂದು ಹೇಳಿದ್ದಾರೆ ಅವೆಲ್ಲವನ್ನೂ ಕೂಡ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಮುಖ್ಯವಾದ ರಸ್ತೆಗಳಿಗೆ ಮೊದಲು ಗಮನ ಕೊಟ್ಟು, ಎರಡನೇ ದರ್ಜೆ ರಸ್ತೆಗಳಿಗೆ ಎರಡನೇ ಗಮನ ಕೊಟ್ಟು ರಸ್ತೆ ರಿಪೇರಿ ಬಗ್ಗೆ ಒಂದು ವ್ಯವಸ್ಥೆಯನ್ನು ಈ ವರ್ಷ ಮಾಡುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

ಶಿವಮೊಗ್ಗ—ಹೊನ್ನಾಳಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮಾಡಬೇಕೆಂದು ಸಲಹೆ ಕೊಟ್ಟಿದಾರೆ. ನಾವು ಐದಾರು ರಸ್ತೆಗಳನ್ನು ಈ ವರ್ಷ ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರೊಳಗೆ ಇದೂ ಒಂದು ರಸ್ತೆ ಇದೆ. ಈ ಕೆಲಸವಾಗುವುದು ಸ್ವಲ್ಪಮಟ್ಟಿಗೆ ನಿಧಾನವಾಗುತ್ತದೆ.

ಶ್ರೀ ದೇವೇಗೌಡರು ಕುದುರೇಮುಖ ರಸ್ತೆ ವಿಷಯವನ್ನು ಪ್ರಸ್ತಾಪ ಮಾಡಿದರು. ಮಲ್ಲೇಶ್ವರದಿಂದ ಹಿಡಿದು ಪಣಂಬೂರುವರೆಗೆ ಮೂರು ಕೋಟಿ ೨೫ ಲಕ್ಷ ರೂಪಾಯಿ ವೆಚ್ಚದಲ್ಲಿ ಹೆಚ್ಚು ತೂಕವನ್ನು ತಡೆಯುತಕ್ಕ ರಸ್ತೆ ಮಾಡಬೇಕು ಎನ್ನುವ ಪ್ರಪೋಸಲ್ ಇದೆ. ಇದಕ್ಕೆ ಕೇಂದ್ರ ಸರ್ಕಾರ ಮೊದಲು ಒಂದು ಕೋಟಿ ೬೦ ಲಕ್ಷ ರೂಪಾಯಿಗಳಿಗೆ ಅಂದಾಜು ಮಾಡಿದ್ದು, ಅದು ಪುನರ್ವಿಮರ್ಶೆಯಾಗಿ ೩ ಕೋಟಿ ೨೫ ಲಕ್ಷ ರೂಪಾಯಿ ಆಗಿದೆ. ಅದಕ್ಕೆ ಬೇಕಾದ ಹಣವನ್ನು ಸಾಲವಾಗಿ ತೆಗೆದುಕೊಂಡು ಈ ರಸ್ತೆಯನ್ನು ನಿರ್ಮಾಣ ಮಾಡಬೇಕು ಎಂದು ಕೇಂದ್ರ ಸರ್ಕಾರದವರು ಸಲಹೆ ಕೊಟ್ಟರು. ಇದರಲ್ಲಿ ನನಗೂ ಮನಸ್ಸಿನಲ್ಲಿ ಏನೋ ಒಂದು ರೀತಿಯ ಅಭಿಪ್ರಾಯ ಬಂತು. ಏನೆಂದರೆ ಇದು ದೊಡ್ಡ ರಸ್ತೆ, ಇದು ಕೇವಲ ಕೇಂದ್ರ ಸರ್ಕಾರ ಮತ್ತು ಇರಾನ್ ಸರ್ಕಾರದ ಭಾಗಿತ್ವವಿರುವ ಕುದುರೇ ಮುಖ ಪ್ರಾಜೆಕ್ಟಿಗೆ ಸಂಬಂಧಪಟ್ಟದ್ದು, ಅವರೇ ಏಕೆ ಈ ರಸ್ತೆಯನ್ನು ಮಾಡಬಾರದು ಎನ್ನುವ ಒಂದು ಅಭಿಪ್ರಾಯ ಬಂತು. ಆದರೆ ಈ ರಸ್ತೆಯನ್ನು ಮಾಡುವುದರಿಂದ ನಮಗೆ ನೇರವಾಗಿ ಪ್ರಯೋಜನವಾಗದೆ ಇದ್ದರೂ ಅಪ್ರತ್ಯಕ್ಷವಾಗಿ ಅನಂತವಾದ ಪ್ರಯೋಜನಗಳು ಆಗುತ್ತವೆ ಎನ್ನುವುದನ್ನು ವಿವರಿಸಿದಾಗ ಆಗ ನನ್ನ ಮನಸ್ಸು ಕೂಡ ಅತ್ತ

ಒಲಿಯಿತು. ಕುದುರೇಮುಖ ಪ್ರಾಜೆಕ್ಟ್ ೪೦೦—೫೦೦ ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಅಲ್ಲಿ ಆಗುವಂಥ ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಲ್ ಎಷ್ಟಿರುತ್ತದೆ ಎನ್ನುವುದನ್ನು ತಿಳಿದುಕೊಳ್ಳಲಾಯಿತು ಜೊತೆಗೆ ಮಲ್ಲೇಶ್ವರದಿಂದ ೧೭—೧೮ ಮೈಲಿ ರಸ್ತೆ ಹೊಸದಾಗಿ ನಿರ್ಮಾಣವಾಗುತ್ತದೆ. ಅದರ ಜೊತೆಗೆ ಫಾರೆಸ್ಟ್ ವೆಲ್ತ್ ಏನಿದೆ ಅದನ್ನೂ ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೂ ಅನುಕೂಲವಾಗುತ್ತದೆ. ಜೊತೆಗೆ ಅಪ್ರತ್ಯಕ್ಷವಾಗಿ ಅಲ್ಲಿ ಒಂದು ದೊಡ್ಡ ಪ್ರಾಜೆಕ್ಟ್ ಆಗುವುದರಿಂದ ಪ್ರಯೋಜನವಾಗುತ್ತದೆ ಮತ್ತು ಅನೇಕ ತರಹ ಅನುಕೂಲಗಳು ನಮ್ಮ ಜನತೆಗೆ ಆಗುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಮನವರಿಕೆ ಮಾಡಿದ ಮೇಲೆ ನಾನು ಒಪ್ಪಿಕೊಂಡೆ.

ಶ್ರೀ ಎಚ್. ಡಿ. ದೇವೇಗೌಡ.—ಸಾಲ ತೆಗೆದುಕೊಂಡು ರಸ್ತೆ ಮಾಡುವುದಕ್ಕೆ ಸಿದ್ಧವಾಗಿರುವುದಾಗಿ ಹೇಳಿದರು. ಇದರ ಅರ್ಥವೇನು ? ೫೦೦ ಕೋಟಿ ರೂಪಾಯಿ ಪ್ರಾಜೆಕ್ಟ್ ಮಾಡುವಾಗ ಮೂರು ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಆಗುತ್ತಿರಲಿಲ್ಲವೇ ? ಈ ಮೂರು ನಾಲ್ಕು ಕೋಟಿ ರೂಪಾಯಿಗಳನ್ನು ರೂರಲ್ ಕಮ್ಯೂನಿಕೇಷನ್ ಖರ್ಚು ಮಾಡುವುದಕ್ಕೆ ಆಗುತ್ತಿತ್ತು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ರಾಜ್ಯದ ಜನತೆಗೆ ಹೆಚ್ಚು ಅನುಕೂಲವಾಗುತ್ತದೆ ಎಂದು ಕಂಡುಬಂದುದರಿಂದ, ಅದಕ್ಕೆ ಒಪ್ಪಿಕೊಳ್ಳಲಾಗಿದೆ,

ಸೇತುವೆಗಳ ವಿಷಯದಲ್ಲಿ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಾದ ಅಂಶವೇನೆಂದರೆ, ನಮ್ಮ ರಾಜ್ಯದಲ್ಲಿ ಹಾಲಿ ಇರತಕ್ಕ ಸೇತುವೆಗಳು ೮೦ ಅಡಿಗೆ ಮೇಲ್ಪಟ್ಟವು ೭೧೭, ಮತ್ತು ೨೦ ರಿಂದ ೧೦೦ ಅಡಿಗಳ ಉದ್ದವಿರುವ ಸೇತುವೆಗಳು ೪೪೨೪ ಕಟ್ಟಬೇಕಾಗಿರುವುದು ೨೦ರಿಂದ ೧೦೦ಅಡಿಗಳ ವರೆಗಿನ ಉದ್ದ ಇರತಕ್ಕವು ೪೪೬೧, ಇದಕ್ಕೆ ೩೨.೭೪ ಕೋಟಿ ರೂಪಾಯಿ ಬೇಕು. ೧೦೦ ಅಡಿಗಿಂತ ಹೆಚ್ಚು ಇರತಕ್ಕವು ೬೧೩ ಮಾತ್ರ ಆಗಬೇಕಾಗಿವೆ. ಅದಕ್ಕೆ ಸುಮಾರು ೨೩ ಕೋಟಿ ರೂಪಾಯಿ ಬೇಕು. ಒಟ್ಟು ೫೫ ಕೋಟಿ ರೂಪಾಯಿ ಬೇಕು. ಇದರಿಂದ ನಮ್ಮಲ್ಲಿರುವ ಎಲ್ಲ ಸೇತುವೆಗಳನ್ನೂ ಪೂರೈಸಬಹುದು. ಎಕ್ಸ್‌ಕವೇಷನ್ನಿಗೆ ೨೦ ಪರ್ಸೆಂಟ್‌ನಷ್ಟು ಅವಕಾಶ ಮಾಡಿದರೆ ಸುಮಾರು ೬೬ ಕೋಟಿ ರೂಪಾಯಿ ಬೇಕಾಗುತ್ತದೆ. ೬೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಆವಾಗ ಸಣ್ಣಪುಟ್ಟ ಸೇತುವೆಗಳು ಎಂದರೆ ೨೦ ರಿಂದ ೧೦೦ ಅಡಿ ಉದ್ದದ ಸೇತುವೆಗಳು ಮತ್ತು ನೂರು ಅಡಿಗಳಿಗೆ ಮೇಲ್ಪಟ್ಟ ಸೇತುವೆಗಳು ಎಲ್ಲವನ್ನೂ ಕಟ್ಟಬಹುದು. ನಾನು ಹೇಳಿದಂತೆ ಈ ಸೇತುವೆಗಳಿಗೆ ನಾವು ಎರಡು ಕೋಟಿ ರೂಪಾಯಿ ಏನು ಪ್ರತಿವರ್ಷ ಖರ್ಚು ಮಾಡಬೇಕೆಂದುಕೊಂಡಿದ್ದೇವೆ ; ಇದು ಸಾಲದು. ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ವರ್ಷಕ್ಕೆ ನಾಲ್ಕೈದು ಕೋಟಿ ರೂಪಾಯಿ ಸೇತುವೆಗಳಿಗಾಗಿ ಖರ್ಚು ಮಾಡುವುದಾದರೆ ೧೦—೧೨ ವರ್ಷಗಳಲ್ಲಿ ಎಲ್ಲ ಮುಗಿಯುತ್ತವೆ. ಈಗ ಇನಿಷಿಯೇಟಿವ್ ತೆಗೆದುಕೊಂಡಿದ್ದೇವೆ ಮತ್ತು ಈ ಹಣವನ್ನು ಅದಕ್ಕೋಸ್ಕರವೇ ಮುಡುಪಾಗಿಡಬೇಕೆಂದು ಕೂಡ ಮಾಡಿದ್ದೇವೆ. ಮುಂದೆ ಯಾವರೀತಿ ಅಗ್ರಿಮೆಂಟ್ ಮಾಡಬೇಕು ಎಂದು ನೋಡಬೇಕಾಗಿದೆ. ಈ ಕೆಲಸಗಳಿಗೆ ಎಸ್ಟಿಮೇಟ್ ಮಾಡಿ, ಟೆಂಡರುಗಳನ್ನು ಕರೆದು ಮಾಡುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೋಸ್ಕರವಾಗಿ ನಿನ್ನೆ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಕನ್‌ಸ್ಟ್ರಕ್ಷನ್ ಕಂಪೆನಿ ಇದೆ, ಅದನ್ನು ದಯವಿಟ್ಟು ಈಗ ಮಾಡಿಕೊಳ್ಳಿ, ಸ್ಟ್ರೆಂಗ್ತನ್ ಮಾಡಿ ಎಂದು ಹೇಳಿದರು. ಅವರಿಗೆ ಈಗ ಕನ್‌ಟಿನ್ಯೂಯಸ್ ವರ್ಕ್ ಕ್ರಿಯೇಟ್ ಮಾಡುವುದಕ್ಕೆ ಒಂದು ಅವಕಾಶವಾಗುತ್ತದೆ. ಸೇತುವೆಗಳನ್ನು ಎಷ್ಟು ಮಂಜೂರು ಮಾಡುತ್ತೇವೆ, ಅದರಲ್ಲಿ ಎರಡು ಕೋಟಿ ರೂಪಾಯಿ ಕೆಲಸವಾಗಬೇಕಾದರೆ ನಾಲ್ಕು ಕೋಟಿ ರೂಪಾಯಿ ಕೆಲಸಕ್ಕೆ ಮಂಜೂರಾತಿಯನ್ನು ಕೊಟ್ಟರೆ ಕಂಟಿನ್ಯೂಯಸ್ ಆಗಿ ಕೆಲಸ ಸಿಕ್ಕುತ್ತದೆ. ಇದರಲ್ಲಿ ಯಾರಿಗೂ ನಷ್ಟವಾಗಬಾರದು. ಇವುಗಳನ್ನೆಲ್ಲ ಗಮನಕ್ಕೆ ತೆಗೆದುಕೊಂಡು ಎಲ್ಲ ಸಾಧನ ಸಂಪತ್ತುಗಳನ್ನೂ ಒದಗಿಸಿ ಅವುಗಳನ್ನು ಕನ್‌ಸ್ಟ್ರಕ್ಷನ್ ಕಂಪೆನಿಗೆ ವಹಿಸಬೇಕೆಂದು ಸರ್ಕಾರದ ಅಭಿಪ್ರಾಯವಿದೆ. ಮತ್ತೆ ಅದರಲ್ಲಿ ಒಂದು ಷೆಡ್ಯೂಲ್ ಆಫ್ ರೇಟ್ಸ್ ಏನಿದೆ ಆ ರೇಟ್ಸ್ ಮೇಲೆ ನಮ್ಮ ಇಂಜನಿಯರ್‌ಗಳು ಏನು ಅಭಿಪ್ರಾಯ ಮಾಡುತ್ತಾರೆ ಅದನ್ನು ಫಿಕ್ಸ್ ಮಾಡಿ ಕೆಲಸ ಮಾಡಿಸಲಾಗುತ್ತದೆ. ಮತ್ತು ಇದರಲ್ಲಿ ಎಸ್‌ಕಲೇಷನ್ ಆಫ್ ರೇಟ್ಸ್ ಎಂದು ಇರುತ್ತದೆ. ಅದನ್ನು ಸಹ ಗಣನೆಗೆ ತೆಗೆದುಕೊಂಡು ಒಂದು ರೀಜನಬಲ್ ರೇಟ್ ಕೊಟ್ಟು ಕೆಲಸ ಮಾಡಿಸುತ್ತೇವೆ. ಈ ರೀತಿ ಕೆಲಸ ಮಾಡಿಸುವುದರಿಂದ ಕೆಲಸ ವೇಗದಲ್ಲಿ ಆಗುತ್ತದೆ ಎಂಬುದು ನಮ್ಮ ಅಭಿಪ್ರಾಯ. ಮಾನ್ಯ ಸದಸ್ಯರ ಅಭಿಪ್ರಾಯವೂ ಸಹ ಇದೇ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕಾಗಿ ಒಂದು ಫಂಡ್ ಮಾಡಲಾಗುತ್ತದೆ.

5-30 P. M.

ಇನ್ನು ಮಾನ್ಯ ವೀರಪ್ಪಗೌಡರು ತಮ್ಮ ಕ್ಷೇತ್ರದಲ್ಲಿ ೫ ಸಣ್ಣಪುಟ್ಟ ಸೇತುವೆಗಳ ಕೆಲಸವಾಗಿಲ್ಲವೆಂದು ಹೇಳಿದರು ; ಅವುಗಳಲ್ಲಿ ಒಂದನ್ನೂ ತಪ್ಪಿಸದೆ ಮಾಡಿಕೊಡುತ್ತೇವೆ.

ಇನ್ನು ತಿಪಟೂರು ಮತ್ತು ಪುತ್ತೂರಿನಲ್ಲಿ ಬೈ—ಪಾಸ್ ರೋಡ್ಸ್ ಆಗಬೇಕೆಂದು ಕೆಲವರು ಹೇಳಿದರು. ನ್ಯಾಷನಲ್ ಹೈವೇಸ್‌ನಲ್ಲಿ ಈ ರೀತಿ ಮಾಡಿಸಬೇಕಾದರೆ ಕೇಂದ್ರ ಸರ್ಕಾರದವರು ಹಣ ಕೊಡಬೇಕಾಗುತ್ತದೆ. ಅವರು ಹಣ ಕೊಡದಿದ್ದರೆ ಕಷ್ಟವಾಗುತ್ತದೆ. ಅದೇರೀತಿ ಸ್ಟೇಟ್ ಹೈವೇಸ್‌ನಲಿ ಮಾಡಿಸಬೇಕಾದರೆ ಏನು ಕಷ್ಟವಿದೆ ಎಂದರೆ ಈ ರಸ್ತೆಗಳು ದೊಡ್ಡದೊಡ್ಡ ಪಟ್ಟಣಗಳ ಪಕ್ಕದಲ್ಲಿ ಬರುವುದರಿಂದ ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಾದರೆ ಸ್ವಲ್ಪ ಕಾಲ ಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನ್ಯಾಷನಲ್ ಹೈವೇಸ್ ಬಗ್ಗೆ ಕೇಂದ್ರ ಸರ್ಕಾರದ ನೀತಿ ಏನಿದೆ, ಅದರಂತೆ ನಮ್ಮ ರಾಜ್ಯದಲ್ಲಿ ಈ ಸಾಲಿನಲ್ಲಿ ಎಷ್ಟು ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಮೈಸೂರು ಮಂಗಳೂರು, ಮೈಸೂರು—ಗುಂಡ್ಲುಪೇಟೆ ಮಾರ್ಗವಾಗಿ ಊಟಿ ಈ ಎರಡು ಮಾರ್ಗಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಅದಕ್ಕೆ ಕೆಲವು ವಿಧಿನಿಯಮಗಳಿವೆ, ಅವುಗಳನ್ನು ಪೂರೈಸಿದ ಮೇಲೆ ಕೆಲಸ ಪ್ರಾರಂಭ ಮಾಡಲಾಗುತ್ತದೆ.

ಇನ್ನು ಸಿಬ್ಬಂದಿ ವಿಷಯದಲ್ಲಿ ಕೆಲವು ಟೀಕೆಟಿಪ್ಪಣಿಗಳು ಬಂದವು ಮೊದಲನೆಯದಾಗಿ ವರ್ಕ್ ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್ ವಿಷಯದಲ್ಲಿ ಏನು ಮಾಡಿದ್ದೀರಿ ಎಂದು ಕೇಳಿದರು. ಈ ಬಗ್ಗೆ ಸರ್ಕಾರದ ನೀತಿ ಏನಿದೆ ಎಂದು ಪ್ರಶ್ನೆ ಮಾಡಿದ್ದಾರೆ. ಈಗ ೧೪ ಸಾವಿರ ಜನರು ವರ್ಕ್‌ಚಾರ್ಜ್ಡ್ ಎಸ್ಟಾಬ್ಲಿಸ್‌ಮೆಂಟ್‌ನಲ್ಲಿದ್ದಾರೆ. ಇವರುಗಳ ಪೈಕಿ ೨೬೦೦ ಜನರನ್ನು ರೆಗ್ಯುಲರ್ ಎಂದು ಮಾಡಿದ್ದೇವೆ, ಆದರೆ ಪೆನ್‌ಷನ್ ಸಿಗುವುದಿಲ್ಲ, ರಜಾ ಸೌಲಭ್ಯ ಸ್ಯಾಲರಿ, ಗ್ರ್ಯಾಚುಯಿಟಿ ಮುಂತಾದ ಸೌಲಭ್ಯಗಳು ಸಿಗುತ್ತವೆ. ಇನ್ನುಳಿದವರಿಗೆ ಸಣ್ಣಪುಟ್ಟ ಸೌಲಭ್ಯಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಅಂದರೆ ರಜಾ ಕೊಡುವುದು, ಎಲ್.ಐ.ಸಿ ಪ್ರೀಮಿಯಮ್ ಕಟ್ಟುವುದಕ್ಕೆ ವ್ಯವಸ್ಥೆ ಮುಂತಾದ ಸಣ್ಣಪುಟ್ಟ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಇತ್ತೀಚೆಗೆ ನಮ್ಮ ಇಂಜಿನಿಯರ್‌ಗಳು ಸೇರಿಕೊಂಡು ಇನ್ನೂ ೪ ಸಾವಿರ ಜನರನ್ನು ರೆಗ್ಯುಲರ ಮಾಡಬೇಕೆಂದು ತಿಳಿಸಿದ್ದಾರೆ. ಅದು ಇನ್ನೂ ಪ್ರೊಸೆಸ್ ಆಗುತ್ತಿದೆ. ಇನ್ನು ಸ್ವಲ್ಪ ದಿವಸಗಳಲ್ಲಿಯೇ ಅದು ಕಾರ್ಯರೂಪಕ್ಕೆ ಬರುತ್ತದೆ.

ಇನ್ನು ಮಾನ್ಯ ದೇವೇಗೌಡರು ಇನ್-ಚಾರ್ಜ್ ಅರೇಂಜ್‌ಮೆಂಟ್ ವಿಚಾರವನ್ನು ಪ್ರಸ್ತಾಪ ಮಾಡಿದರು. ನಮ್ಮ ಇಲಾಖೆಯಲ್ಲಿ ಹೋದವರ್ಷ ೧೧ ಜನ ಅಸಿಸ್ಟೆಂಟ್ ಇಂಜಿನಿಯರ್‌ಗಳನ್ನು ಮತ್ತು ೬೨ ಜನ ಜೂನಿಯರ್ ಇಂಜಿನಿಯರ್‌ಗಳನ್ನು ಅಪ್-ಗ್ರೇಡ್ ಮಾಡಲಾಯಿತು. ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ಗುಲ್ಬರ್ಗ, ಬೀದರ್ ಈ ಕಡೆಗಳಲ್ಲಿ ಮಳೆ ಇಲ್ಲದೆ ಕಾಮಗಾರಿ ಕೆಲಸಗಳನ್ನು ಮಾಡಿಸಬೇಕಾಗಿ ಬಂದ ಕೆಲವು ಪೋಸ್ಟ್‌ಗಳನ್ನು ರಚನೆ ಮಾಡಬೇಕಾಗಿ ಬಂತು. ಆಗ ಇವರನ್ನು ತಾತ್ಕಾಲಿಕವಾಗಿ ಅಪ್ ಗ್ರೇಡ್ ಮಾಡಲಾಯಿತು. ಆ ಕೆಲಸ ಮುಗಿದ ಮೇಲೆ ಅವರುಗಳನ್ನು ಡಿಮೋಷನ್ ಮಾಡಬೇಕಾಗಿ ಬಂತು. ಈ ರೀತಿ ಮಾಡಿದರೆ ಅವರ ಸರ್ವಿಸ್‌ನಲ್ಲಿ ಹಾರ್ಟ್‌ಬರ್ ಬರುತ್ತದೆ ಎಂದು ವಿಚಾರ ತಮಗೂ ಗೊತ್ತಿದೆ. ಈ ಕಾರಣದಿಂದ ಮತ್ತು ಇನ್ನು ೧೨ ತಿಂಗಳುಗಳಲ್ಲಿಯೇ ಕೆಲವು ಅಪ್-ಗ್ರೇಡ್ ಪೋಸ್ಟ್‌ಗಳು ಖಾಲಿ ಬೀಳುವ ಸಂಭವವಿದ್ದುದರಿಂದ, ಇವರನ್ನು ಡಿಮೋಷನ್ ಮಾಡಲಿಲ್ಲ. ಜೊತೆಗೆ ಇದರಿಂದ ಫೈನಾನ್ಸಿಯಲ್ ಇಂಪ್ಲಿಕೇಷನ್ ಇಲ್ಲದೇ ಇದ್ದುದರಿಂದ ಆರ್ಥಿಕ ಇಲಾಖೆಯವರ ಒಪ್ಪಿಗೆ ಪಡೆದುಕೊಂಡು ಅಪ್-ಗ್ರೇಡ್ ಮಾಡಲಾಯಿತು. ಅವರುಗಳ ಮನಸ್ಸಿನಲ್ಲಿ ಒಂದು ತರಹ ಫ್ರಸ್ಟ್ರೇಷನ್ ಬರದೆ, ಒಂದು ತರಹ ತೃಪ್ತಿ ಬರಲಿ ಎಂದು ಈ ರೀತಿ ಮಾಡಲಾಯಿತು

ಇನ್ನು ಮಾನ್ಯ ದೇವೇಗೌಡರು ಔಟ್ ಆಫ್ ಟರ್ನ್ ಪ್ರಮೋಷನ್ ವಿಷಯದ ಬಗ್ಗೆ ಕೇಳಿದರು. ಇದು ಸರಿಯಲ್ಲ ಎಂಬುದು ಸರ್ಕಾರದ ಅಭಿಪ್ರಾಯವೂ ಸಹ ಆಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಅದು ಸರಿಯಲ್ಲ ಎಂದು ತಮಗೆ ಯಾವಾಗ ಕಂಡುಬಂತು ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಯಾವ ಸಂದರ್ಭದಲ್ಲಿ ಇದು ಆಗಿದೆ ಎಂಬುದನ್ನು ನಾನು ಹೇಳುತ್ತೇನೆ, ಈ ಇಲಾಖೆಯಲ್ಲಿ ೩೨ ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಇದು ಒಂದು ದೊಡ್ಡ ಇಲಾಖೆಯಾಗಿದೆ. ಲೋಕೋಪಯೋಗಿ ಇಲಾಖೆಯೊಳಗೆ ಆಗಿದ್ದರೆ ನೇರವಾಗಿ ತಕ್ಷಣ ನನ್ನ ಗಮನಕ್ಕೆ

ಬರುತ್ತಿತ್ತು. Supposing I send some people to C.I.T.B, or to Housing Board or to Municipalities or to various other departments who are borrowing agencies ಯಾವ ಯಾವ ಕಾಲದಲ್ಲಿ ಏನೇನು ಮಾಡುತ್ತಾರೆ ಎನ್ನುವುದು ತಕ್ಷಣದಲ್ಲಿ ನನ್ನ ಗಮನಕ್ಕೆ ಬರುವುದಿಲ್ಲ. ಹೀಗಾಗಿದೆ ಎಂದು ನನ್ನ ಗಮನಕ್ಕೆ ಬಂದಕೂಡಲೇ ಅವರೆಲ್ಲರನ್ನೂ ಅವರವರ ಸ್ಥಳದಲ್ಲೇ ಇರಿಸಬೇಕು ಎಂದು ಹೇಳಿದ್ದೇನೆ, ಇನ್ನು ಮುಂದೆ ಈ ರೀತಿ ಮಾಡಕೂಡದು ಎಂದು ಕಟ್ಟಾಜ್ಞೆ ವಿಧಿಸಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಡೆಪ್ಯುಟೇಷನ್ ಕೆಲಸಕ್ಕಾಗಿ ಸರಕಾರದವರೇ ಆರ್ಡರ್ ಮಾಡುತ್ತಾರೆ. Assistant Engineer and above almost all the officers' deputation should be made by Government alone.

SRI H. M. CHANNABASAPPA.—I would appeal to you to understand my difficulties. You are wrong premise.

SRI H. D. DEVEGOWDA.— You spell out in how many such posts these Junior officers have been posted ?

SRI H. M. CHANNABASAPPA.— There are 8 Junior Engineers working as Assistant Engineers in P.W.D. ಅವರ ಹೆಸರು ಹೇಳಿ ಅಂದರೆ ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಹೆಸರು ಬೇಕಾಗಿಲ್ಲ.

SRI H. M. CHANNABASAPPA — Supposing you are in the Government today you cannot escape those difficulties.

SRI H. D. DEVEGOWDA.— Whoever is in Government, if such an act is done they have to be criticised and condemned.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ರಿಟಿಸೈಸ್ ಮಾಡುವುದಕ್ಕೆ ನಾನು ಬೇಡ ಎನ್ನುವುದಿಲ್ಲ. ನಾನು ಏನು ಅದು ನ್ಯಾಯವಾಗಿದೆ ಎಂದು ಹೇಳುತ್ತಿದ್ದೇನೆ ಅವರು ಅದನ್ನು ಒಪ್ಪಿಕೊಳ್ಳಬೇಕು. ನ್ಯಾಯ ಹೇಳಿದರೂ ಒಪ್ಪಿಕೊಳ್ಳದೇ ಹೋದರೆ ಅದು ಯಾವ ಕ್ರಿಟಿಸಿಸಂ. ಇದು ಒಂದು ದೊಡ್ಡ ಇಲಾಖೆ. ಅನೇಕ ಇಲಾಖೆಯವರು ಕೇಳುತ್ತಾರೆ; ಸಕ್ಕರೆ ಕಾರ್ಖಾನೆಯವರು ಒಬ್ಬ ಜೂನಿಯರ್ ಇಂಜಿನಿಯರ್ ಬೇಕು ಎಂದು ಕೇಳುತ್ತಾರೆ, ನಾವು ಕೊಡುತ್ತೇವೆ, ಇವರ ವಿಷಯವಾಗಿ ನಮಗೆ ನೇರವಾದ ಗಮನವಿರುವುದಿಲ್ಲ, ನನ್ನ ಇಲಾಖೆಯ ಚೌಕಟ್ಟಿನೊಳಗೆ ಬಂದರೆ ನಾನು ಮಾಡುತ್ತೇನೆ. ಈಗೆ ವಾಟರ್ ಸಪ್ಲೈ ಬೋರ್ಡಿನವರು, ಕಾರ್ಪೊರೇಷನ್ನಿನವರು, ಮುನಿಸಿಪಾಲಿಟಿಯವರು ಮತ್ತು ಇತರ ಅನೇಕ ಬೋರ್ಡಿನವರು ಕೇಳುತ್ತಾರೆ, ನಾವು ಕೊಟ್ಟಿದ್ದೇವೆ. ಅವರು ತಪ್ಪು ಮಾಡಬಾರದು ಎಂದು ಕಟ್ಟಾಜ್ಞೆ ವಿಧಿಸಿದ್ದೇವೆ. ತಾವು ನನ್ನ ಮೇಲೆ ವ್ಯಾಜ್ಯ ಮಾಡಿದರೆ ನಾನು ಏನು ಹೇಳಲಿ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಇದರ ಬಗ್ಗೆ ಹೇಳಿದ ಮೇಲೆ, ತಾವು ಮಾಡಿದ್ದೀರಿ.

SRI H. M. CHANNABASAPPA.—You have got only two eyes, I don't think you have four eyes. I too have two eyes and my own limitations. I do concede Mr Devegowda that it is wrong, it should not have been done it. I have taken note of it and I have issued orders that it shall not be done hereafter.

ಶ್ರೀ ವೆಂಕಟಲಿಂಗಯ್ಯ.—ಈಗ ವಯಡಿರುವುದಕ್ಕೆ ಪನಿಷ್‌ಮೆಂಟ್ ಇಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಪನಿಷ್‌ಮೆಂಟ್ ಯಾರ ಮೇಲೆ ಮಾಡಬೇಕು ತೋರಿಸಿ ಮಾಡುತ್ತೇನೆ. ತಮ್ಮ ಮೈಸೂರು ಮುನಿಸಿಪಾಲಿಟಿಯಲ್ಲಿ ಮಾಡಿದರೆ, ತಮ್ಮ ಮೇಲೆ ತಾನೇ ಶಿಕ್ಷೆ ಮಾಡುವುದು,

ಶ್ರೀ ಎಂ. ವೆಂಕಟಲಿಂಗಯ್ಯ.—ಯಾರೇ ಆಗಲಿ ಮಾಡಬೇಕು.

SRI H. M. CHANNABASAPPA.— That is alright. I agree. I will bring a law, we will pass a law and we will punish them.

ಶ್ರೀ ಕೋಣಂದೂರು ಲಿಂಗಪ್ಪ —ತಮ್ಮ ಮಾತು ಕೇಳಿದರೆ, ಸ್ವರ್ಗವೇ ಬಂದ ಹಾಗೆ ಆಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ – ಅದೇ ನಮ್ಮಲ್ಲಿರುವ ಬುದ್ಧಿವಂತಿಕೆ, ಶಕ್ತಿಸಾಮರ್ಥ್ಯ. ಬುದಿವಂತಿಕೆ ಇಲ್ಲದಿದ್ದವರು ಸರಕಾರ ನಡೆಸುವುದಕ್ಕೆ ಆಗುತ್ತದೆಯೇ ?

ಶ್ರೀ ಸಿ. ಬೈರೇಗೌಡ —ತಾವು ಇಲ್ಲಿಯವರೆಗೂ ಹೇಳಿದ್ದು ಬರೇ ಬುದ್ಧಿವಂತಿಕೆಯದಷ್ಟೆ.

ಶ್ರೀ ಎಚ್. ಎಂ. ಬನ್ನಬಸಪ್ಪ.— ನಮಗೆ ಬುದ್ಧಿವಂತಿಕೆ, ಶಕ್ತಿ ಸಾಮರ್ಥ್ಯ ಇರುವುದಕ್ಕೆ ನಾವು ಇಲ್ಲಿ ಬಂದು ಕುಳಿತಿರುವುದು, ದಡ್ಡರು ಬಂದು ಇಲ್ಲಿ ಕುಳಿತುಕೊಳ್ಳುವುದಕ್ಕಾಗುತ್ತದೆಯೇ ? ಮಾನ್ಯ ದೇವೇಗೌಡರು ಸೆಂಟ್ರಲ್ ಮ್ಯಾಕನಿಕಲ್ ಆರ್ಗನೈಸೇಷನ್ ವಿಷಯ ಮತ್ತು ಲೋಕೋಪಯೋಗಿ ಇಲಾಖೆಯನ್ನು ರೀ–ಆರ್ಗನೈಸೇಷನ್ ಮಾಡುವ ವಿಷಯವನ್ನು ಬಹಳ ಸ್ವಾರಸ್ಯವಾಗಿ ಹೇಳಿದರು. I do agree that they are very constructive suggestions.

ಶ್ರೀ ಹೆಚ್. ಡಿ ದೇವೇಗೌಡ.—ನಾವೇನೋ ಒಳ್ಳೆಯ ಸಲಹೆಗಳನ್ನು ಕೊಡುತ್ತೇವೆ, ಆದರೆ ತಾವು ಮಾಡಬೇಕಲ್ಲ.

ಶ್ರೀ ಎಚ್ ಎಂ. ಚನ್ನಬಸಪ್ಪ —ವಿಜಿಲೆನ್ಸ್ ಕಮಿಷನ್‌ರಿಗೆ ಚೀಫ್ ಇಂಜಿನಿಯರ್ ಗ್ರೇಡ್ ಕೊಡಬೇಕೆಂದು ತಾವು ಹೇಳಿದಿರಿ, ನಾವು ಅದನ್ನು ನ್ಯಾಯ ಎಂದು ಒಪ್ಪಿಕೊಂಡು ಮಾಡಲಿಲ್ಲವೇ ?

SRI D. DEVARAJ URS.— Some things they think it is proper and Government also thinks some to be proper and they do it.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೆಂಟ್ರಲ್ ಮೆಕಾನಿಕಲ್ ಆರ್ಗನೇಜೇಷನ್ನು ಸ್ವಲ್ಪ ರಿವೈಸ್ ಮಾಡಬೇಕು. ಇದಕ್ಕೆ ಒಬ್ಬ ಚೀಫ್ ಇಂಜಿನಿಯರನ್ನು ನೇಮಕ ಮಾಡಿದರೆ ಉತ್ತಮ ಎಂದು ಹೇಳಿದಿರಿ ಈಗ ಅಲ್ಲಿ ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್ ಇದ್ದಾರೆ. ಅಲ್ಲಿ ೪೪೦೦ ಮಿಷನರೀಸ್ ಇವೆ. ಇವುಗಳ ಪೈಕಿ ಕಂಡಂಮ್ ಆಗಿರುವವು ೨೬೦ ಇವೆ. ಸಿಕ್ ಆಗಿರತಕ್ಕದ್ದು ೨೦ ಪರ್ಸೆಂಟ್ ಇದೆ. ಮತ್ತು ಉಪಯೋಗದಲ್ಲಿರುವುದು ೪೦–೫೦ ಪರ್ಸೆಂಟ್ ಬರುತ್ತದೆ. ಇನ್ನು ಸೆಂಟ್ರಲ್ ಮೆಕಾನಿಕಲ್ ಆರ್ಗನೈಸೇಷನನಲ್ಲಿ ಲೆಕ್ಕಪತ್ರಗಳನ್ನು ಇಟ್ಟಿಲ್ಲ ಎನ್ನತಕ್ಕದ್ದು ಸರಿಯಲ್ಲ. ಲೆಕ್ಕಪತ್ರಗಳನ್ನು ಇಟ್ಟಿದ್ದಾರೆ. ಎಲ್ಲೆಲ್ಲಿ ಯಾವ ಯಾವ ಮೆಷನರಿ ಇದೆ ಎಂಬುದನ್ನು I will place it on the table you could go through it ಈಗ ಅಲ್ಲಿ ಪರೀಕ್ಷೆ ಮಾಡಿ ಯಾವ ಯಾವ ಪ್ರಮಾಣದಲ್ಲಿ ಯಾವ ಯಾವದು ರಿಪೇರಿ ಆಗಬೇಕು ಅವುಗಳನ್ನು ರಿಪೇರಿ ಮಾಡುವುದಕ್ಕೆ ಉದ್ದೇಶ ಇಟ್ಟುಕೊಂಡಿದ್ದಾರೆ. ಇನ್ನೂ ಅಲ್ಲೆ ಒಬ್ಬ ಚೀಫ್ ಇಂಜಿನಿಯರ್‌ರವರನ್ನು ಅಪಾಯಿಂಟ್ ಮಾಡಬೇಕಾದರೆ ಅದು ಬದಲಾವಣೆಗೆ ಸಾಧ್ಯವಾಗುತ್ತದೆಯೇ ಎಂಬುದೇ ಮೂಲ ಪ್ರಶ್ನೆ. ರೀ–ಆರ್ಗನೇಜೇಷನ್ ಮಾಡಿ, ವ್ಯವಸ್ಥೆಯನ್ನು ಉತ್ತಮಪಡಿಸಲು ಪ್ರಯತ್ನ ಮಾಡಬಹುದು. ಆದರೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಬದಲು ಚೀಫ್ ಇಂಜಿನಿಯರನ್ನು ಅಲ್ಲೆ ಹಾಕಿದ ಮಾತ್ರದಿಂದ ಏನಾದರೂ ಪ್ರಯೋಜನ ಆಗುತ್ತದೆಯೇ ಎಂಬುದು ವಿವಾದಾತ್ಮಕ ಪ್ರಶ್ನೆ. But anyway, Government will be too glad to examine any constructive proposals. I do agree we have invested crores and crores of Rupees and that money must be put to best use possible.

SRI H. D. DEVEGOWDA.—We are going to make some more recommendations also.

SRI H. M. CHANNABASAPPA.—They have made some suggestions. I shall be very happy to invite all constructions and take you also to confidence and see what best could be done to improve the efficiency of this organisation

ಇನ್ನು ರೈಲ್ವೆ ವಿಷಯ. ಇದರಲ್ಲಿ ಒಂದು ಮಾತು ಹೇಳಬೇಕಾಗಿದೆ. ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರಕಾರ ಸಾಕಷ್ಟು ಪ್ರಮಾಣದಲ್ಲಿ ರೈಲ್ವೇ ಲೈನನ್ನು ಹಾಕಿಲ್ಲ ಎನ್ನುವುದು ನಿರ್ವಿವಾದವಾದ ಅಂಶ.

ಶ್ರೀ ಹೆಚ್. ಡಿ. ದೇವೇಗೌಡ.—ಬೆಂಗಳೂರು-ಮೈಸೂರು ರೈಲ್ವೆಲೈನನ್ನು ಬ್ರಾಡ್‌ಗೇಜ್ ಮಾಡುತ್ತೀರಾ?

ಶ್ರೀ ಎಚ್. ಎಂ ಚನ್ನಬಸಪ್ಪ.—ಅಂಕಿ-ಅಂಶ ಕೋಟ್ ಮಾಡಬೇಕಾದುದು ಅನಾವಶ್ಯಕ ಒಂದು ಸಂತೋಷದ ಸಂಗತಿ ಎಂದರೆ ಮಂಗಳೂರು-ಹಾಸನ ರೈಲು ಮಾರ್ಗಕ್ಕಾಗಿ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಮೊನ್ನೆ ಪ್ರಧಾನ ಮಂತ್ರಿಗಳು ಮಂಗಳೂರಿಗೆ ಬಂದಾಗ ನಮ್ಮ ಮುಖ್ಯ ಮಂತ್ರಿಗಳು ಇದು ಸಾಲದು ಇನ್ನೂ ಹೆಚ್ಚಿಗೆ ಕೊಡಿ ಬೇಗ ಪೂರೈಸಬೇಕಾಗಿದೆ ಎಂದು ತಿಳಿಸಿದ್ದಾರೆ. ನನಗೆ ವರ್ತಮಾನ ಬಂದಿದೆ ಮೂರು ಕೋಟಿ ಅರವತ್ತು ಲಕ್ಷ ರೂಪಾಯಿ ಗಳನ್ನು ಕೊಡುತ್ತಾರೆ ಎಂದು ಇದು ಒಂದು ಶುಭಸೂಚನೆ ಮತ್ತು ಇನ್ನಷ್ಟು ಕೊಡಬೇಕೆಂದು ಮುಂದೆ ಕೂಡ ಬರೆಯುವವರಿದ್ದೇವೆ ಈಗ ಗುಂತಕಲ್ ಮತ್ತು ಬೆಂಗಳೂರು ರೈಲುಮಾರ್ಗದ ಕೆಲಸ ನಡೆಯುತ್ತಾ ಇದೆ. ಅದಕ್ಕೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಹಣ ಕೊಡುತ್ತಾ ಇಲ್ಲ. ಇದರ ಬಗ್ಗೆ ಕೂಡ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ತಕ್ಷಣದಲ್ಲೇ ಕೇಂದ್ರದವರನ್ನು ಕಂಡು ನಮಗೆ ಅಗತ್ಯವಾಗಿರತಕ್ಕ ರೈಲು ಮಾರ್ಗಗಳು ಅಂದರೆ, ಬೆಂಗಳೂರು-ಮೈಸೂರು ರೈಲು ಮಾರ್ಗವನ್ನು ಬ್ರಾಡ್‌ಗೇಜ್ ಮಾಡುವುದು ಹುಬ್ಬಳ್ಳಿ-ಕಾರವಾರ ರೈಲು ಮಾರ್ಗವನ್ನು ತೆಗೆದುಕೊಳ್ಳ ತಕ್ಕದ್ದು. ಕೀ ಲೈನ್ಸ್ ಎಂದು ಏನಿವೆ ಅವುಗಳನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಕೇಂದ್ರ ಸರಕಾ ರದ ಮೇಲೆ ಒತ್ತಾಯ ತಂದಿದ್ದೇವೆ.

ಕೆಲವು ಎನ್‌ಕ್ವಯಿರಿ ವಿಷಯದಲ್ಲಿ ಮಾನ್ಯ ಸದಸ್ಯರು ಮತ್ತು ಮಾನ್ಯ ದೇವೇಗೌಡರು ಮತ್ತೆ ಕೆಲವರು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಮುಖ್ಯವಾಗಿ ಚಿಕ್ಕಹೊಳೆ ಪ್ರಾಜೆಕ್ಟನ್ನು ಪ್ರಸ್ತಾಪ ಮಾಡಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರು. ಈಗ ಚಿಕ್ಕ ಹೊಳೆಪ್ರಸಂಗದಲ್ಲಿ ಎನ್‌ಕ್ವೈರಿ ರಿಪೋರ್ಟ್ಸ್‌ನಲ್ಲಿ ತಿಳಿದಿತಕ್ಕ ಸುಮಾರು ೧೪ ಜನ ಇಂಜಿನಿಯರ್ಸ್ ಬಗ್ಗೆ ವಿಚಾರ ಮಾಡಬೇಕು ಎಂದು ತಿಳಿಸಿದ್ದೇವೆ. ೧೪ ಜನರಲ್ಲಿ ನಾವು ಎಲ್ಲರಿಗೂ ಕೂಡ ಅವರು ಏನೇನು ತಿಳಿಸಿದ್ದಾರೆ ಅದನ್ನು ತಿಳಿಸಿ ಷೋಕಾಸ್ ನೋಟೀಸ್ ಕೊಟ್ಟಿದ್ದೇವೆ. ಮತ್ತೇ ಎಕ್ಸ್‌ಪ್ಲನೇಷನ್ ಕೊಡುವುದಕ್ಕೂ ತಿಳಿಸಿದ್ದೇವೆ. ಆದರಲ್ಲಿ ಈಗಾಗಲೆ ಮೂರು ಜನ ಎಕ್ಸ್‌ಪ್ಲನೇಷನ್ ಕೊಟ್ಟಿದ್ದಾರೆ, ಬಾಕಿ ೧೧ ಜನರು ಇವೊತ್ತಿನವರೆಗೂ ೪-೫ ಸಾರಿ ಹೇಳಿದರು ಕೂಡ they have not yet sent their exolanation. Unless explanations of all the 14 people are before us we cannot proceed

ಶ್ರೀ ಹೆಚ್. ಡಿ. ದೇವೇಗೌಡ.—೧೧ ಜನರು ಕೊಟ್ಟಿಲ್ಲ ಎಂದರೆ ಅವರ ಮರ್ಜಿಗೋಸ್ಕರ ಕೆಲಸ ಮಾಡಬೇಕೆ?

SRI H. M. CHANNABASAPPA.–A last date must be fixed I would like to assure this house that if they do not give their explanation on or before the last date fixed, we will proceed. These are all highly technical matters. we have got to take their explanations and then proceed.

ಶ್ರೀ ಹೆಚ್. ಡಿ. ದೇವೇಗೌಡ.—ಎನ್‌ಕ್ವಯಿರಿ ರಿಪೋರ್ಟ್ ಬಂದದ್ದು ಯಾವಾಗ?

ಶ್ರೀ ಎಚ್. ಎಂ. ಚನ್ನಬಸಪ್ಪ.—೩೦ನೇ ಆಗಸ್ಟ್ ೧೯೭೩ರಕ್ಕೆ ಬಂದು ಸುಮಾರು ಒಂದು ವರ್ಷ ಆರು ತಿಂಗಳಾಯಿತು.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಯಾವಾಗ ನೋಟೀಸ್ ಕೊಟ್ಟಿದ್ದೀರಿ?

SRI H.M. CHANNABASAPPA.–I will place before the chair every thing the hon members want. why should we hide any thing ? we are not under anybody's obligation.

ಈಗ ಪಾರ್ಟೇಜ್ ಆಫ್ ಸಿಮೆಂಟ್ ಮತ್ತು ಸ್ಟೀಲ್ ಬೆಂಗಳೂರು ಡಿವಿಜನ್ ಇಲ್ಲಿ ಒಟ್ಟು ೯ ಕೇಸಿನಲ್ಲಿ ಇದರ ವಿಚಾರ ಮಾಡಿದೆ ಇದರಲ್ಲಿ ೭ ಕೇಸಿನಲ್ಲಿ ಕಬ್ಬಿಣ ಕಡಿಮೆ ಕಂಡುಬಂದಿದೆ. ಮತ್ತೆ ಎರಡು ಕೇಸಿನಲ್ಲಿ ಸಿಮೆಂಟ್ ಕಡಿಮೆ ಆಗಿದೆ. ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ಬಿಲ್ಡಿಂಗ್ಸ್‌ನಲ್ಲಿ ೫೭,೦೦೦ ರೂಪಾಯಿ ಕಬ್ಬಿಣ ಲೋಪವಾಗಿದೆ. ಎರಡನೆಯದು ಸೆಕೆಂಡ್ ಸ್ಟೇಜ್ ಮಲ್ಟಿಸ್ಟೋರೀಡ್ ಬಿಲ್ಡಿಂಗ್ ೬ ಲಕ್ಷದ ೮ ಸಾವಿರದ ೪೭೦ ರೂಪಾಯಿ ಕಬ್ಬಿಣ ಹೋಗಿದೆ. ಮತ್ತೆ ಕ್ಯಾನ್ಸರ್ ರಿಲೀಫ್ ಇನ್‌ಸ್ಟಿಟ್ಯೂಟ್‌ನಲ್ಲಿ ೨ ಲಕ್ಷದ ೨೫ ಸಾವಿರದ ೧೮೦ ರೂಪಾಯಿ ಹೋಗಿದೆ. ಮತ್ತೆ ಪೋಲೀಸ್ ಬಿಲ್ಡಿಂಗ್ ಅಡುಗೋಡಿ ೪,೦೭೦ ರೂಪಾಯಿ ಹೋಗಿದೆ ಮತ್ತೆ ಕೋರಮಂಗಲ ಪೋಲೀಸ್ ಬಿಲ್ಡಿಂಗ್‌ಗೆ ೧೫,೪೦೦ ರೂಪಾಯಿ ಹೋಗಿದೆ. ಮತ್ತೆ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್ ೧೦ ಸಾವಿರದ ೨೨೦ ರೂಪಾಯಿ ಹೋಗಿದೆ. ಮತ್ತೆ ಎಸ್ ಸಿ. ಹಾಸ್ಟೆಲ್ ಎಂ ಜಿ ರೋಡ್ ೩೬,೬೦೦ ರೂಪಾಯಿ ಹೋಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಎಸ್. ಸಿ. ಹಾಸ್ಟೆಲ್ ಪ್ರೈಮ್‌ರೋಸ್‌ನಲ್ಲಿ ಹೋದದ್ದು ಎಷ್ಟು

ಶ್ರೀ ಹೆಚ್. ಎಂ. ಚನ್ನ ಬಸಪ್ಪ.—ಅಲ್ಲಿ ಕಡಿಮೆ ಆಗಿಲ್ಲ ಇನ್ನು ಸಿಮೆಂಟ್ ಈ ಎರಡರಲ್ಲಿ ಎಸ್. ಸಿ. ಹಾಸ್ಟೆಲ್ ಪ್ರೈಮ್‌ರೋಸ್ ೨೯,೫೦೦ ರೂಪಾಯಿ. ಎಸ್. ಸಿ. ಹಾಸ್ಟೆಲ್ ಎಂ. ಜಿ, ರೋಡ್ ೧೯,೫೦೦ ರೂಪಾಯಿ ಈ ಎರಡು ಕೇಸಿನಲ್ಲೂ ವಿಜಿಲೆನ್ಸ್ ಕಮಿಷನ್‌ರವರು ರಿಪೋರ್ಟ್ ಕೊಟ್ಟಿದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟ್ ಹಾಸ್ಟೆಲ್ ವಿಷಯದ ಬಗ್ಗೆ ೭ ವಿಷಯದಲ್ಲಿ ಪ್ರಿಲಿಮಿನರಿ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಇದರಲ್ಲಿ ಎರಡು ಬಗೆ ಇದೆ. ಅಧಿಕಾರಿಗಳು ಯಾರ ಯಾರ ಮೇಲೆ ಎಷ್ಟುಮಟ್ಟಿಗೆ ರೆಸ್‌ಪಾನ್ಸಿಬಲಿಟಿ ಇದೆ, ಕಂಟ್ರಾಕ್ಟರ್ಸ್ ಯಾರು ಯಾರ ಮೇಲೆ ಎಷ್ಟೆಷ್ಟುಮಟ್ಟಿಗೆ ರೆಸ್‌ಪಾನ್ಸಿಬಲಿಟಿ ಇದೆ ಎಂಬುದನ್ನು they are further erquiring. these are the two sets of people who have got to be dealt with. ಅಧಿಕಾರಿಗಳ ವಿಷಯದಲ್ಲಿ ಎರಡು ಕೇಸಿನಲ್ಲಿ ವಿಜಿಲೆನ್ಸ್ ಕಮಿಷನ್ನಿನವರು ಅಂಡರ್ ಸೆಕ್ಷನ್ ೧೨ ಆಫ್ ದಿ ಸಿ.ಸಿ.ಎ. ರೂಲ್ಸ್ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಶಿಫಾರಸ್ಸು ಮಾಡಿದ್ದಾರೆ. ಆ ಕ್ರಮ ಈಗ ತೆಗೆದುಕೊಳ್ಳುತ್ತಾ ಇದ್ದೇವೆ. ಈಗ ಕ್ರಮ ತೆಗೆದುಕೊಳ್ಳುವುದರಲ್ಲಿ ಈ ಮಾರ್ಗಗಳು ಇವೆ. ಅಧಿಕಾರಿಗಳ ವಿಷಯದಲ್ಲಿ ಯಾವರೀತಿ ಅವರು ತಪ್ಪನ್ನು ಸಾಬೀತು ಮಾಡಿ ಕಳುಹಿಸುತ್ತಾರೆ ಆ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಕಂಟ್ರಾಕ್ಟರ್ ವಿಷಯದಲ್ಲಿ ೩-೪ ಭಾಗದಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು ಅದೇನೆಂದರೆ

(1) No further works to be given and they must be black-listed.

(2) Losses to be recovered

(i) deposits to be confiscated
(ii) Civil suits to be filed and amount recovered
(iii) Prosecution to be launched

SRI H. D. DEVEGOWDA.—When such a huge money is involved according to the preliminary report of the vigilance commission, may I know what action you have taken against the Officers and the contractors?

6-00 P. M.

SRI H M. CHANNABASAPPA — We have already issued instruction.

ಶ್ರೀ ಕಾಗೋಡ ತಿಮ್ಮಪ್ಪ — ಬೆಂಗಳೂರಿನ ೨ ಕೇಸ್‌ನಲ್ಲಿ ವಿಜಲೆನ್ಸ್ ಕಮಿಷನ್‌ನವರು ಕೊಟ್ಟು ರಿಪೋರ್ಟ್ ಮೇಲೆ ಕ್ರಮತೆಗೆದುಕೊಂಡಿದ್ದೀರಾ?

ಶ್ರೀ ಎಚ್. ಎಂ ಚನ್ನಬಸಪ್ಪ — ವಿಜಿಲೆನ್ಸ್ ಕಮಿಷನ್‌ನವರು ಈ ಎರಡು ಕೇಸ್‌ನಲ್ಲಿ ಯಾರು ಯಾರ ಮೇಲೆ ಏನೇನು ಕ್ರಮತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. We have asked the chief engineer to freeze the money

that may come up for payment. We have issued notices to such of the contractors, why we should not take action against them to black-list them. ಯಾರು ಯಾರಿಗೆ ಏನೇನು ಕೊಟ್ಟಿದ್ದಾರೆ ಎನ್ನುವ ವಿವರ ನನಗೆ ಗೊತ್ತಿಲ್ಲ ನಾನಂ ಕೊಡುತ್ತೇನೆ.

I have enough courage of conviction to tell you that I will place before this Assembly all facts.

SRI S. BANGARAPPA,—We want to know when exactly the preliminary report from the vigilance commission was received by the Government? Are there not instances where in, on the basis of the preliminary report submitted by the vigilance Commission; the Officers concerned are kept under suspension. Why in this particular case this has not been done?

SRI H. M. CHANNABASAPPA.-The Vigiance Commission has framed procedure for keeping the officers under suspension The officers is responsible to some extent but the contractor is responsible to the most extent because ಈ ಕಟ್ಟಡಕ್ಕೆ ಎಷ್ಟು ಬೇಕು ಎಂದು ಇಷ್ಯೂ ಮಾಡಿದ್ದು ಸ್ಪಷ್ಟವಾಗಿದೆ.

